ಕಲ್ಯಾಣ ಕಿರಣ

ಜನವರಿ-2008

ಬೆಲೆ-10.00



ಬಸವಯೋಗಿ ಸಿದ್ಧರಾಮೇಶ್ವರರು



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-38 ಬಸವ ಶಕೆ-874 ಆಜೀವ ಸದಸ್ಯತ್ವ 1000 ರೂ.

ಸಂಚಿಕೆ-1 ಜನವರಿ-2008 ವಾರ್ಷಿಕ ಚಂದಾ 100/- ರೂ.

ಹೊಸ ವರ್ಷದ ಶುಭಾಶಯಗಳೊಡನೆ ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು ॥ ಪ ॥

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ.॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ಸಾಹಿತ್ಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ 4 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು ॥ 6 ॥

-ಮಾತಾಜಿ

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಕಲಿಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.


★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಕಲ್ಯಾಣ ಕಿರಣ ಚಂದಾದಲ್ಲಿ ಹೆಚ್ಚಳ

ಏರುತ್ತಿರುವ ಸಾಮಾಗ್ರಿಗಳ ಬೆಲೆಯಿಂದಾಗಿ ಕಲ್ಯಾಣ ಕಿರಣದ ಚಂದಾದಲ್ಲಿ ಬೆಲೆ ಏರಿಕೆಯನ್ನ ಮಾಡಲಾಗುತ್ತಿದೆ.

ಬಿಡಿ ಪ್ರತಿ - 10 ರೂ, ವಾರ್ಷಿಕ ಚಂದಾ - 100 ರೂ, ಆಜೀವ ಸದಸ್ಯತ್ವ - 1000ರೂ. ದಯವಿಟ್ಟು ಸಹಕರಿಸಿರಿ.



21ನೆಯ ಶರಣ ಮೇಳದ ಪ್ರಯುಕ್ತ ''ಕಲ್ಯಾಣ ಕಿರಣ''ದ ಓದುಗರಿಗೆ ರಾಷ್ಟ್ರೀಯ ಬಸವ ದಳ ಹಾಗೂ ಗಣಾಚಾರ ದಳಗಳ ವತಿಯಿಂದ

ಹೊಸ ವರ್ಷದ ಶುಭಾಶಯಗಳು
ಹಾಗೂ
ಬಸವ ಕ್ರಾಂತಿ ದಿನದ ಶುಭಾಶಯಗಳು

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10,

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತೊಂದನೆಯ

ಶರಣ ಮೇಳ

2008ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15, ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿ ವರ್ಷವೂ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೊಂದನೆಯ ಶರಣ ಮೇಳವು 2008ನೇ ಇಸ್ವಿಯ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ, ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10ರಿಂದ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ, ಪಥ ಸಂಚಲನ ಇರುತ್ತದೆ. ಪ್ರತಿ ದಿನ ಬೆಳಿಗ್ಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40 ದಿವಸ, 30 ದಿವಸ, 20 ದಿವಸ, 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಶರಣ ಮೇಳಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಬನ್ನಿರಿ.

ಲಿಂಗಾಯತರು ಹಿಂದುಗಳಲ್ಲ

ಲಿಂಗಾಯತ ಧರ್ಮ ಸ್ವತಂತ್ರ ಧರ್ಮ - ಭಾಗ -3

- ಮಾತಾಜಿ

ಇಬ್ಬರು ವ್ಯಕ್ತಿಗಳಿರುತ್ತಾರೆ. ಅವರಿಗೆ ತಮ್ಮವೇ ಆದ ಅಂಗಾಂಗಗಳಿರುತ್ತವೆ. ಹಾಗೆಯೇ ಧರ್ಮಗಳಿಗೆ ತಮ್ಮವೇ ಆದ ಲಕ್ಷಣಗಳು ಇರುತ್ತವೆ. ಲಿಂಗಾಯತ ಧರ್ಮದ ಲಕ್ಷಣಗಳು ಹೀಗಿವೆ:

01. ಧರ್ಮಗುರು - ಧರ್ಮಸ್ಥಾಪಕರಾದ ವಿಶ್ವಗುರು ಬಸವಣ್ಣನವರು
02. ಧರ್ಮಸಂಹಿತೆ - ವಚನ ಸಾಹಿತ್ಯ
03. ಧರ್ಮ ಭಾಷೆ - ಕನ್ನಡ
04. ದೇವರ ಹೆಸರು - ಲಿಂಗದೇವ
05. ಧರ್ಮಲಾಂಛನ - ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗ
06. ಧರ್ಮಕ್ಷೇತ್ರ - ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ, ಶರಣ ಭೂಮಿ ಬಸವ ಕಲ್ಯಾಣ
07. ಧಾರ್ಮಿಕ ವಾರ್ಷಿಕ ಸಮಾವೇಶ - ಶರಣ ಮೇಳ
08. ಧಾರ್ಮಿಕ ವ್ರತ - ಶರಣ ವ್ರತ
09. ಧರ್ಮ ಸಂಸ್ಕಾರ - ಇಷ್ಟಲಿಂಗ ದೀಕ್ಷೆ
10. ಧಾರ್ಮಿಕ ಕೇಂದ್ರ - ಬಸವ (ಅನುಭವ) ಮಂಟಪ
11. ಧಾರ್ಮಿಕ ವಿಧಿ -ವಿಧಾನ - ಗುರು -ಲಿಂಗ -ಜಂಗಮದ ಅರ್ಚನೆ
12. ವಾರದ ಸಮಾವೇಶ- ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆ
13. ಪವಿತ್ರ ಮಾಸ - ಶ್ರಾವಣ
14. ಧರ್ಮ ಧ್ವಜ - ಷಟ್ಕೋನ ಮಧ್ಯೆ ಇಷ್ಟಲಿಂಗ
15. ಪರಂಪರೆ - ಬಸವಣ್ಣನವರೇ ಆದಿಗುರುವಾಗಿ ಬಂದ ಶರಣ ಪರಂಪರೆ
16. ಧಾರ್ಮಿಕ ಸಹೋದರತ್ವ - ಜಾತಿ ವರ್ಣ ವರ್ಗರಹಿತ ಶರಣ ಸಮಾಜ ನಿರ್ಮಾಣ
17. ಧರ್ಮದ ಧ್ಯೇಯ - ಜಾತಿ ವರ್ಣ ವರ್ಗರಹಿತ ಧರ್ಮಸಹಿತ ಕಲ್ಯಾಣ ರಾಜ್ಯ ನಿರ್ಮಾಣ

ಹೀಗೆ ಸಿದ್ಧಾಂತ, ಸಾಧನೆ, ದರ್ಶನ ಶಾಸ್ತ್ರ, ಸಮಾಜ ಶಾಸ್ತ್ರ ಎಲ್ಲ ದೃಷ್ಟಿಯಿಂದಲೂ ಸ್ವಾವಲಂಬಿಯಾಗಿರುವ ಮತ್ತು ಕೇವಲ ಕೆಲವೊಂದು ಅಂಶಗಳನ್ನು ಹೊರತು ಪಡಿಸಿ, ಹೆಚ್ಚಿನ ವಿಷಯಗಳಲ್ಲಿ ಸಂಪೂರ್ಣ ಭಿನ್ನಮತವನ್ನು ಹೊಂದಿರುವ ಲಿಂಗಾಯತ ಧರ್ಮ ಹಿಂದು ಧರ್ಮದ ಅಂಗವಾಗಿ, ಒಂದು ಜಾತಿ ಅಥವಾ ಮತ (ಸೈದ್ಧಾಂತಿಕ ಅಭಿಪ್ರಾಯ) ಅಥವಾ ಪಂಥವಾಗಿರಲು ಸಾಧ್ಯವೇ ಇಲ್ಲ. ಒಂದು ರಾಜ್ಯದಲ್ಲಿ ಇನ್ನೊಂದು ರಾಜ್ಯ ಹೇಗೆ ಇರುವುದಿಲ್ಲವೋ ಹಾಗೆ ಒಂದು ಧರ್ಮದಲ್ಲಿ ಇನ್ನೊಂದು ಧರ್ಮ ಇರುವುದು ಸಾಧ್ಯವೇ ಇಲ್ಲ.

ಸಾಂಸ್ಕೃತಿಕ ಸಾಮ್ಯ

ಲಿಂಗಾಯತರಲ್ಲಿ ಉಡುವಿಕೆ, ಹೆಸರುಗಳನ್ನು ಇಡುವಿಕೆ, ಕೆಲವೊಂದು ಶಿಷ್ಟಾಚಾರ ಪಾಲನೆಯಲ್ಲಿ ಹಿಂದುಗಳೊಡನೆ ಸಾಮ್ಯತೆ ಇದೆ. ಕ್ರೈಸ್ತರು ಮತಾಂತರದ ಕಡೆಗೆ ಸದಾ ಕಣ್ಣಿಟ್ಟವರು. ಸಾಮಾನ್ಯವಾಗಿ ಹಿಂದುಳಿದ ಜನಾಂಗದವರು ಅದರಲ್ಲೂ ದಲಿತರು ಹೆಚ್ಚಾಗಿ ಕ್ರೈಸ್ತರಾಗುವ ಪ್ರಕ್ರಿಯೆ ನಡೆಯುತ್ತದೆ. ಕ್ರೈಸ್ತರ ಹೆಸರುಗಳು ಬೇರೆ ದೇಶದವೇ ಆಗಿದ್ದು, ಅಲ್ಲಿ ಕುಂಕುಮಧಾರಣೆ ಇತ್ಯಾದಿ ಇಲ್ಲ ಎಂದು ದಲಿತರು ಮತಾಂತರಕ್ಕೆ ಹಿಂಜರಿದಾಗ ಬಹುದೊಡ್ಡ ತಿದ್ದುಪಡಿಯನ್ನು ಕ್ಯಾಥೋಲಿಕ್ ಪಂಥ ಮಾಡಿ ಮಹಿಳೆಯರಿಗೆ ಕುಂಕುಮಧಾರಣೆಗೆ ಅವಕಾಶ ನೀಡಿತು. ಅದೇ ರೀತಿ ಈಗ ಹಿಂದು ಸಂಸ್ಕೃತಿಯ ಹೆಸರುಗಳನ್ನು ಮಕ್ಕಳಿಗೆ ಇಡಲಾಗುತ್ತಿದೆ. ಸಂಸ್ಕೃತಿಯ ವಿಷಯಕ್ಕೆ ಬಂದಾಗ ಭಾಷೆಗೂ ಸಂಸ್ಕೃತಿಗೂ

ನಿಕಟ ಸಂಬಂಧವಿದ್ದು, ಇಲ್ಲಿ ಭಾಷೆ ಮತ್ತು ಭೌಗೋಳಿಕತೆಯು ಕೆಲಸ ಮಾಡುತ್ತದೆ. ಆದ್ದರಿಂದ ಹಿಂದು ಸಂಸ್ಕೃತಿ ಎನ್ನುವುದಕ್ಕಿಂತಲೂ ಭಾರತೀಯ ಸಂಸ್ಕೃತಿ ಎಂಬುದು ಹೆಚ್ಚು ಸೂಕ್ತವೆನಿಸೀತು. ಮುಸಲೀಮ್ ಮಹಿಳೆಯರು ತಾಳಿ ಕಟ್ಟುತ್ತಾರೆ, ಬಳೆ ತೊಡುತ್ತಾರೆ. ಅಂದ ಮಾತ್ರಕ್ಕೆ ಕ್ರೈಸ್ತರು, ಮುಸಲೀಮರನ್ನು ಹಿಂದುಗಳೆನ್ನಲು ಬರುವುದೆ? ಹಾಗೆಯೇ ಲಿಂಗಾಯತರು ಹೆಸರುಗಳಲ್ಲಿ, ಬಳೆ - ಕುಂಕುಮ - ಮಾಂಗಲ್ಯ - ಕಾಲುಂಗುರ ಮುಂತಾಗಿ ಧರಿಸುವುದರಲ್ಲಿ ಹಿಂದು ಸಂಸ್ಕೃತಿಯನ್ನು ಹೊಂದಿದ್ದಾರೆ ಎಂದ ಮಾತ್ರಕ್ಕೆ ತಾತ್ವಿಕವಾಗಿ, ಧಾರ್ಮಿಕವಾಗಿ ಹಿಂದುಗಳು ಎನ್ನಲು ಬರುವುದಿಲ್ಲ.

ವಚನ ಸಾಹಿತ್ಯ ಅಧ್ಯಯನ ಮಾಡದೆ ತಮ್ಮ ಧರ್ಮದ ಸ್ವರೂಪವನ್ನು ತಿಳಿಯದ ಬಹುಪಾಲು ಲಿಂಗಾಯತರು (ಮತ್ತು ಮಠಾಧೀಶರು ಸಹ) ತಮ್ಮ ಧರ್ಮಕ್ಕೆ ವಿರುದ್ಧವಾಗಿ ಹೋಮ - ಹವನಾದಿಗಳನ್ನು ಬಹುದೇವತೋಪಾಸನೆಯನ್ನು ಮಾಡುವರು, ಜಾತಿ ಭೇದ - ಅಸ್ಪೃಶ್ಯತೆ ಆಚರಿಸುವರು. ಅವರು ಹಿಂದು ಆಚರಣೆ ಮಾಡುತ್ತಾರೆ ಎಂದ ಮಾತ್ರಕ್ಕೆ ಅವರ ಧರ್ಮಕ್ಕೇನೂ ಕುಂದು ಬರುವುದಿಲ್ಲ. ವ್ಯಕ್ತಿಗಳು ಭ್ರಷ್ಟಾಚಾರಿಗಳಾದ ಮಾತ್ರಕ್ಕೆ ಸಂವಿಧಾನವು ಕಲಂಕಿತವಾಗುವುದಿಲ್ಲ. ಲಿಂಗಾಯತ ಸಮಾಜದಲ್ಲಿ ಯಾರೋ ಕೆಲವರು ತಮ್ಮ ಧರ್ಮ ಸಾಹಿತ್ಯವನ್ನು ಅಧ್ಯಯನ ಮಾಡದೆ ಸುತ್ತಮುತ್ತಲಿನವರನ್ನು ನೋಡಿ ಆಚರಿಸುವ ಕಾರಣ ಇಂಥ ತಪ್ಪು ಮಾಡುವರು. ಯಾರೋ ಕೆಲವರು ತಮ್ಮ ವೈಯಕ್ತಿಕ ದೌರ್ಬಲ್ಯದಿಂದ ಮಾಂಸಾಹಾರ ಮಾಡಿದ ಮಾತ್ರಕ್ಕೆ ಲಿಂಗಾಯತ ಧರ್ಮವು ಮಾಂಸಾಹಾರಿ ಧರ್ಮವಾಗದು. ಅದೇ ರೀತಿ ಆಚರಣೆಗಳಲ್ಲಿ ಕೆಲವರು ತಪ್ಪು ಮಾಡಿದ ಮಾತ್ರಕ್ಕೆ ಲಿಂಗಾಯತ ಧರ್ಮದ ಅವಿಭಾಜ್ಯ ಅಂಗವಾಗಿ ಆ ತಪ್ಪು ಇರದು.

ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ

ಕೆಲವರು ದುರುದ್ದೇಶದಿಂದ, ಮತ್ತೆ ಕೆಲವರು ಅಜ್ಞಾನದಿಂದ ವೀರಶೈವ - ಲಿಂಗಾಯತ ಇವುಗಳನ್ನು ಸಮಾನಾರ್ಥದಲ್ಲಿ, ಒಂದೇ ಧರ್ಮದ ಎರಡು ಹೆಸರುಗಳೆಂದು ಬಳಸುತ್ತಾರೆ. ಇದು ಸಂಪೂರ್ಣ ಅಸಂಬದ್ಧ ಮತ್ತು ಅಸತ್ಯ. ಉದಾಹರಣೆಗೆ, ಮಹಮ್ಮದೀಯ ಧರ್ಮ ಮತ್ತು ಇಸ್ಲಾಂ ಎಂದು ಯಾರಾದರೂ ಬಳಸಿದರೆ ಎರಡೂ ಪದಗಳು ಕುರಾನ್ ಬೋಧಿಸುವ ಧರ್ಮಕ್ಕೆ ಅನ್ವಯವಾಗುತ್ತವೆ. ಹಾಗೆ ಲಿಂಗಾಯತ ಮತ್ತು ವೀರಶೈವ ಒಂದೇ ಧರ್ಮಕ್ಕೆ ಅನ್ವಯವಾಗವು. ಅವುಗಳಲ್ಲಿನ ವ್ಯತ್ಯಾಸವನ್ನು ನೋಡೋಣ.

ವೀರಶೈವ/ರು	ಲಿಂಗಾಯತ/ರು
1. ಶಿವನಲ್ಲಿ ವೀರತಮವಾದ ಭಕ್ತಿ ಹೊಂದಿರುವುದು	1. ಸೃಷ್ಟಿಕರ್ತ ಲಿಂಗದೇವನಲ್ಲಿ ಭಕ್ತಿ ಹೊಂದಿರುವುದು
2. ಸಾಮಾಜಿಕವಾಗಿ ಚತುರ್ವರ್ಣ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿದೆ	2. ವರ್ಣ, ಜಾತಿ ಪದ್ಧತಿ ನಂಬದು
3. ದಲಿತ, ಅಸ್ಪೃಶ್ಯರಿಗೆ ದೀಕ್ಷೆ ನಿಷಿದ್ಧ	3. ಎಲ್ಲ ಮಾನವರಿಗೂ ದೀಕ್ಷೆ ಲಭ್ಯ
4. ಸ್ಥಾವರ ಲಿಂಗ ಪೂಜಕರು	4. ಕೇವಲ ಇಷ್ಟಲಿಂಗ ಪೂಜಕರು
5. ಬಹುದೇವತೋಪಾಸಕರು	5. ಏಕದೇವೋಪಾಸಕರು
6. ಧರ್ಮಗುರು ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪದವರು	6. ಲಿಂಗಾಯತ ಧರ್ಮ ಸಂಸ್ಥಾಪಕರು ಬಸವಣ್ಣನವರು ಎಂದು ದೃಢವಾಗಿ ನಂಬುವವರು
7. ವೇದಾಗಮ ಶಿವ ಪುರಾಣಗಳೇ ಆಧಾರ ಗ್ರಂಥ ಎನ್ನುವವರು	7. ವೇದಾಗಮ ಪುರಾಣಗಳನ್ನೊಪ್ಪದೆ ವಚನ ವಾಙ್ಮಯವನ್ನು ಮಾತ್ರ ಧಾರ್ಮಿಕ ಸಂವಿಧಾನ ಎನ್ನುವವರು
8. ಸಂಸ್ಕೃತ ಧರ್ಮಭಾಷೆ. ಆಯಾ ಪ್ರಾಂತ್ಯಗಳಲ್ಲಿ ಆಯಾ ಭಾಷೆ ಮಾತನಾಡುವರು.	8. ಕನ್ನಡ ಧರ್ಮಭಾಷೆ. ಎಲ್ಲಿಯೇ ಇರಲಿ ಕನ್ನಡವನ್ನು ಮನೆ ಮಾತು ಆಗಿ ಇರಿಸಿ ಕೊಂಡಿರುವರು

9. ಶಿವಾದ್ವೈತ ಸಿದ್ಧಾಂತ	9. ಶೂನ್ಯ ಸಿದ್ಧಾಂತ
10. ಭಕ್ತ-ಮಾಹೇಶ್ವರ ಎಂಬ ಭೇದವಿದೆ	10. ಶರಣ ಸಮೂಹದಲ್ಲಿ ಅಂಥ ಭೇದವಿಲ್ಲ. ಜಂಗಮ ಅಥವಾ ಮಾಹೇಶ್ವರ ಹುಟ್ಟಿನಿಂದ ಬರುವ ಜಾತಿಯಲ್ಲ
11. ವೀರಶೈವರು ಪೂಜಿಸುವ ಲಿಂಗಗಳು ಸ್ಥಾವರ ಲಿಂಗದ ಚಿಕ್ಕರೂಪಗಳಾಗಿ ಇರುತ್ತವೆ. ಮತ್ತು ಚತುರ್ವರ್ಣಕ್ಕೆ ಅನುಸಾರವಾಗಿ ಶಿಲೆ, ಸುವರ್ಣ, ರಜತ, ಪಾದರಸ ಇತ್ಯಾದಿ ಧಾತುಗಳಿಂದ ರೂಪುಗೊಂಡಿರುತ್ತದೆ. ಅದಕ್ಕೆ ಕಂಥೆ ಇರದು. ಈ ಶಿವಲಿಂಗಗಳು ಶಿವನ ಕುರುಹು.	11. ಲಿಂಗಾಯತರು ಪೂಜಿಸುವ ಇಷ್ಟ ಲಿಂಗಗಳು ಗೋಲಾಕಾರವಾಗಿದ್ದು ಹೊಳಪುಳ್ಳ ಕಂಥೆಯನ್ನು ಹೊಂದಿರುತ್ತವೆ. ಎಲ್ಲ ಲಿಂಗಾಯತರು ಒಂದೇ ಬಗೆಯ ಕಂಥೆಯನ್ನು ಹೊಂದಿರುವ ಲಿಂಗಗಳನ್ನು ಧರಿಸಿ, ಪೂಜಿಸುತ್ತಾರೆ. ಇಷ್ಟಲಿಂಗವು ಪಾರ್ವತಿ ಪತಿ ಶಿವನ ಕುರುಹಲ್ಲ; ಬ್ರಹ್ಮಾಂಡದೊಡೆಯನಾದ ಲಿಂಗದೇವನ ಕುರುಹು
12. ತಮಿಳು ನಾಡಿನ ವೀರಶೈವರಿಗೆ ತಿರುವಾಚಕಮ್ ತೆಲುಗು ನಾಡಿನ ವೀರಶೈವರಿಗೆ ಶ್ರೀಕರ ಭಾಷ್ಯ ಮುಂತಾದವು ಶಾಸ್ತ್ರಗ್ರಂಥಗಳು	12. ಲಿಂಗಾಯತ ಧರ್ಮೀಯರಿಗೆ ವಚನ ಸಾಹಿತ್ಯವೇ ಪ್ರಮಾಣ ಗ್ರಂಥ
13. ದೀಕ್ಷೆಯ ನಂತರ ಪೂರ್ವದ ವರ್ಣ ,ಜಾತಿ ಅಳಿಯವು. (ತಮಿಳು ನಾಡು ವೀರಶೈವ)	13. ದೀಕ್ಷಾ ನಂತರ ಪೂರ್ವದ ವರ್ಣ, ಜಾತಿ ಮುಂತಾದ ಭೇದ ಅಳಿಯುತ್ತವೆ. ಎಲ್ಲರೂ ಸಮಾನರು.
14. ದೀಕ್ಷೆಯನ್ನು ಪಡೆದ ಬ್ರಾಹ್ಮಣ ವೀರಶೈವ, ಕ್ಷತ್ರಿಯ, ವೈಶ್ಯ, ಶೂದ್ರ ವೀರಶೈವರಲ್ಲಿ ಪರಸ್ಪರ ಊಟೋಪಚಾರವಿಲ್ಲ, ವೈವಾಹಿಕ ಸಂಬಂಧವಿಲ್ಲ.	14. ದೀಕ್ಷಿತರಲ್ಲಿ ಊಟೋಪಚಾರ, ವಿವಾಹ ಸಂಬಂಧ ನಡೆಯುತ್ತವೆ.
15. ವೀರಶೈವರ ಅನೇಕ ಪಂಗಡಗಳಲ್ಲಿ ಮಾಂಸಾಹಾರ -ವಿದೆ (ಕೇರಳ ವೀರಶೈವ). ಕೇರಳದ 7 ಪಂಗಡಗಳಲ್ಲಿ 3 ಪಂಗಡ ಸಸ್ಯಾಹಾರಿ, 4 ಪಂಗಡ ಮಾಂಸಾಹಾರಿಗಳು	15. ಲಿಂಗಾಯತ ಧರ್ಮೀಯರು ಶುದ್ಧ ಸಸ್ಯಾಹಾರಿಗಳು
16. ಶವಗಳನ್ನು ಸುಡುವರು	16. ಶವಗಳನ್ನು ಸಮಾಧಿ ಮಾಡುವರು
17. ಪಂಚ ಸೂತಕಗಳುಂಟು	17. ಪಂಚ ಸೂತಕಗಳನ್ನು ನಂಬುವುದಿಲ್ಲ

ಲಿಂಗಾಯತ ಸಮಾಜದಲ್ಲಿ ಲಿಂಗಾಯತ ಎಂಬ ಪದ ಮಾತ್ರ ರೂಢಿಯಲ್ಲಿತ್ತು. ಗುರು ಬಸವಣ್ಣನವರೇ ಇದರ ಸಂಸ್ಥಾಪಕರು ಎಂಬ ನಂಬಿಕೆ ದೃಢವಾಗಿತ್ತು. ಗುರು ಬಸವಣ್ಣನವರ ಸ್ಥಾನವನ್ನು ಕೆಳಗಿಳಿಸಲು, ಲಿಂಗಾಯತ ಸಮಾಜದಲ್ಲಿ ಲಿಂಗೀ ಬ್ರಾಹ್ಮಣ, ಲಿಂಗೀ ಶೂದ್ರ ಎಂದೆಲ್ಲ ವಿಂಗಡಣೆ ಮಾಡಿ ಮೇಲು-ಕೀಳು ಎಂದು ಸೃಷ್ಟಿಸುವ ಧೂರ್ತ ಆಲೋಚನೆಯಿಂದ ಶೀತಲೀಕೃತ ಶವಾಗಾರದಲ್ಲಿದ್ದ ವೀರಶೈವ ಪದವನ್ನು ಕೃತಕವಾಗಿ ಸಮಾಜದಲ್ಲಿ, ಸಾಹಿತ್ಯದಲ್ಲಿ ಸೇರಿಸಿ ಅಖಿಲ ಭಾರತ ವೀರಶೈವ ಮಹಾಸಭಾ ಸ್ಥಾಪಕರಾದ ಹಾನಗಲ್ ಕುಮಾರ ಸ್ವಾಮಿಗಳು ಮತ್ತು ಪಂಚಪೀಠದವರು ಲಿಂಗಾಯತ ಧರ್ಮದ ಇತಿಹಾಸ, ಸಮಾಜ ಮತ್ತು ಸಾಹಿತ್ಯವನ್ನು ವಿಕೃತಗೊಳಿಸಿದರು.

ವೀರಶೈವವು ವೈದಿಕ ಸಂಪ್ರದಾಯವನ್ನೇ ಅನುಸರಿಸುತ್ತದೆ. ಬ್ರಾಹ್ಮಣವಟುಗಳಿಗೆ ಉಪನಯನ

ಮಾಡಿದಂತೆ ಅಯ್ಯನವರ ವಟುಗಳಿಗೆ ಅಯ್ಯಾಚಾರ ಮಾಡಲಾಗುತ್ತದೆ. ಬ್ರಾಹ್ಮಣರಲ್ಲಿ ಹೆಣ್ಣು ಮಕ್ಕಳಿಗೆ ಉಪನಯನ ಹೇಗಿಲ್ಲವೋ ಹಾಗೆ ಅಯ್ಯಾಚಾರವು ಅಯ್ಯನವರ ಹೆಣ್ಣುಮಕ್ಕಳಿಗೆ ಇರುವುದಿಲ್ಲ. ಬ್ರಾಹ್ಮಣ ವಟುಗಳು ಶಿಖೆಯನ್ನು ಬಿಟ್ಟಂತೆ ಅಯ್ಯನವರ ಮಕ್ಕಳಿಗೂ ಶಿಖೆ (ಜುಟ್ಟು) ಬಿಡಿಸಲಾಗುತ್ತದೆ. ಲಿಂಗಾಯತ ಧರ್ಮವು ಭಕ್ತ- ಮಹೇಶ್ವರ (ಜಂಗಮ) ಎಂಬ ಭೇದವೆಣಿಸದೆ ಎಲ್ಲರಿಗೂ ಇಷ್ಟಲಿಂಗ ದೀಕ್ಷೆಯನ್ನು ಕರುಣಿಸುತ್ತದೆ. ಹೃದಯ ಅಂತರ್ಗತವಾದ ಆತ್ಮಚೈತನ್ಯದ ಪ್ರತೀಕವಾದ ಇಷ್ಟಲಿಂಗವನ್ನು ಎದೆಯ ಮೇಲೆ ಕಟ್ಟುವ ಸತ್ ಸಂಪ್ರದಾಯಕ್ಕೂ ಚ್ಯುತಿ ತಂದು ವೀರಶೈವ ವಾದಿಗಳು ಜನಿವಾರವನ್ನು ಹೋಲುವಂತೆ ಅಡ್ಡಲಾಗಿ, ಉದ್ದವಾದ ಶಿವದಾರದಿಂದ ಕಟ್ಟಿ, ಅದರ ತುದಿಯಲ್ಲಿ ಕರಡಿಗೆ, ಇಷ್ಟಲಿಂಗ ಕಟ್ಟುವುದನ್ನು ಜಾರಿಗೆ ತಂದರು. ಜನಿವಾರವಿಲ್ಲದ್ದರಿಂದ ಶೂದ್ರರು ಎಂಬ ವೈದಿಕರ ಆರೋಪದಿಂದ ಮುಕ್ತರಾಗಲು, ತಾವು ಲಿಂಗೀಬ್ರಾಹ್ಮಣರು ಎಂದು ಹೇಳಿಕೊಳ್ಳಲು ವೀರಶೈವ ಪದವನ್ನು ಆಗಂತುಕವಾಗಿ ಲಿಂಗಾಯತ ಸಮಾಜದೊಳಕ್ಕೆ ಸೇರಿಸಿಕೊಂಡರು. ತಮಿಳುನಾಡು, ಆಂಧ್ರ ವೀರಶೈವರಲ್ಲಿ ಚತುರ್ವರ್ಣ ವರ್ಗೀಕರಣ ಇದ್ದುದರಿಂದ ಆ ಪದವನ್ನು ಎರವಲು ತಂದು ಲಿಂಗಾಯತ ಸಮಾಜದಲ್ಲಿ ಸೇರಿಸಿಕೊಂಡುದಲ್ಲದೆ ಪಂಚ ಪೀಠಾಧೀಶರು ಲಿಂಗಾಯತ ಸಮಾಜದಲ್ಲೂ ಚತುರ್ವರ್ಣಗಳನ್ನು ಹುಡುಕುವ ಸಾಹಸ ಮಾಡಿದರು.

ತಮ್ಮ ಧರ್ಮ ಸಂಹಿತೆಯಾದ ವಚನ ಸಾಹಿತ್ಯದ ಅಧ್ಯಯನ, ಪಾರಾಯಣ ಬಿಟ್ಟು ಸಂಸ್ಕೃತ ಪಾಠಶಾಲೆ ತೆರೆದು ವೈದಿಕವನ್ನು ಕಲಿಸಿ ಪೂಜೆ, ದೀಕ್ಷೆ, ಪೌರೋಹಿತ್ಯಗಳನ್ನು ವೈದಿಕೀಕರಣಗೊಳಿಸಿದರು. 12ನೆಯ ಶತಮಾನದಿಂದ 19ನೆಯ ಶತಮಾನದವರೆಗೆ ಕೆಡದಿದ್ದ ಲಿಂಗಾಯತ ಶರಣ ಸಂಸ್ಕೃತಿ 20ನೆಯ ಶತಮಾನದಲ್ಲಿ ವಿಕೃತಗೊಳ್ಳ ತೊಡಗಿತು. ಉತ್ತರ ಭಾರತದಲ್ಲಿ ಬ್ರಾಹ್ಮಣ ವರ್ಣದವರು ಶರ್ಮ, ಶಾಸ್ತ್ರಿ ಎಂದು ಹೆಸರಿಟ್ಟುಕೊಳ್ಳುವಂತೆ ಕರ್ನಾಟಕದಲ್ಲಿಯೂ ತಮ್ಮ ಹೆಸರಿನ ಮೊದಲಿಗೆ ವೇದಮೂರ್ತಿ ಎಂದು ಕೊನೆಗೆ ಶರ್ಮಾ, ಶಾಸ್ತ್ರಿ ಆರಾಧ್ಯ ಎಂದು ಹೆಸರಿಟ್ಟುಕೊಳ್ಳಲು ಆರಂಭಿಸಿದರು. ಲಿಂಗಾಯತರಲ್ಲಿ ಗೋತ್ರ, ಸೂತ್ರ, ಶಾಖೆ ಇತ್ಯಾದಿ ಹೇಳುವ ಪರಿಪಾಠವೇ ಇರಲಿಲ್ಲ. ಇದನ್ನು ಕೇಳಿ ಲಿಂಗಾಯತರನ್ನು ಪಂಚಪೀಠದ ಮಠಗಳವರು ಗೊಂದಲಕ್ಕೆ ಈಡು ಮಾಡತೊಡಗಿದರು.

ಗುರು ಬಸವಣ್ಣನವರು ಲಿಂಗಾಯತ ಎಂಬ ಹೊಸ ಧರ್ಮವನ್ನು ಕೊಟ್ಟಾಗ ಅಸ್ತಿತ್ವದಲ್ಲಿದ್ದ ಹಲವಾರು ಮತ, ಪಂಥ, ಜಾತಿಗಳವರು, ಬುಡಕಟ್ಟುಗಳವರು ಈ ಧರ್ಮವನ್ನು ಸ್ವೀಕರಿಸಿದರು. ಸಂಗಮೇಶ್ವರದ ಅಪ್ಪಣ್ಣ ಎನ್ನುವ ಶರಣನ ಈ ವಚನ ಅದನ್ನು ಪುಷ್ಟೀಕರಿಸುತ್ತದೆ.

ಅಯ್ಯಾ, ವೈಷ್ಣವರಾದವರು ತಮ್ಮ ವಿಷ್ಣುವಂ ಬಿಟ್ಟು ಕಳೆದು
ಲಿಂಗಭಕ್ತರಾದರು ಕೆಲವರು
ಅಯ್ಯಾ, ಜೈನರಾದವರು ತಮ್ಮ ಜೈನ ಧರ್ಮವಂ ಬಿಟ್ಟು
ಲಿಂಗಭಕ್ತರಾದರು ಅನೇಕರು
ಅಯ್ಯಾ, ದ್ವಿಜರಾದವರು ತಮ್ಮ ಕರ್ಮಂಗಳ ಬಿಟ್ಟು ಕಳೆದು
ಶಿವಭಕ್ತರಾದರನೇಕರು...............

ಹೀಗೆ ಬಂದ ಸಮೂಹದಲ್ಲಿ ವೀರಶೈವರೂ ಅಂಥದೊಂದು ಪಂಗಡ. ಹಿಂದು ಸಮಾಜ ಎಂಬ ಪೂರ್ವಾಶ್ರಯದ ಪ್ರಭಾವದಂತೆ, ದೀಕ್ಷಾ ನಂತರದಲ್ಲಿಯೂ ತಮ್ಮ ಹಳೆಯ ಜಾತಿಯನ್ನು ಮರೆಯದೆ ಲಿಂಗಾಯತರಲ್ಲಿಯೂ ಬಣಜಿಗ ಲಿಂಗಾಯತ, ಸಾದು ಲಿಂಗಾಯತ, ಗೌಡ ಲಿಂಗಾಯತ, ನೊಳಂಬ, ಗಾಣಿಗ, ರೆಡ್ಡಿ, ಮಡಿವಾಳ, ಕುಂಬಾರ ಎಂದೆಲ್ಲ ಸಂಬೋಧಿಸುವಾಗ ವೀರಶೈವರು ತಾವು ವೀರಶೈವ ಲಿಂಗಾಯತರು ಎಂದುಕೊಂಡಿದ್ದಷ್ಟೇ ಅಲ್ಲ ತಾವು ಇತರ ಲಿಂಗಾಯತರಿಗಿಂತಲೂ ಶ್ರೇಷ್ಠ ಎಂಬ ಮೇಲರಿಮೆಯಿಂದ ಬೀಗಿದ್ದಕ್ಕಾಗಿ ಶರಣರಿಂದ ಟೀಕಿಸಲ್ಪಟ್ಟುದನ್ನು ಕಾಣುತ್ತೇವೆ. ವೀರಶೈವ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ಶ್ರೇಷ್ಠತ್ವ ಬರುವುದಿಲ್ಲ ಎಂದು ಸಿದ್ಧರಾಮೇಶ್ವರರು ತಮ್ಮೊಂದು ವಚನದಲ್ಲಿ ಟೀಕಿಸಿದ್ದಾರೆ.

ಶ್ರೀಗುರು ಬಸವಣ್ಣನವರ ಮುತ್ತಾತಂದಿರು ಆಂಧ್ರ ಮೂಲದ ಕಮ್ಮೆ ಬ್ರಾಹ್ಮಣರು. ಅವರು ಲಿಂಗೀ ಬ್ರಾಹ್ಮಣರು. ಸಂಚರಿಸುತ್ತ ಬಂದು ಬಾಗೇವಾಡಿ ಪ್ರದೇಶದಲ್ಲಿ ನೆಲೆಸಿದರು. ಆಂಧ್ರದಲ್ಲಿ ಪ್ರಚಲಿತವಿದ್ದ ಈ ಸಂಪ್ರದಾಯದವರು ಚರಲಿಂಗ ಪೂಜಕರು. ಬ್ರಾಹ್ಮಣ ಚರಲಿಂಗಧಾರಿ ಗೃಹಸ್ಥರನ್ನು ಮಾಹೇಶ್ವರರೆಂದು, ಬ್ರಾಹ್ಮಣ ಸನ್ಯಾಸಿಗಳನ್ನು ಜಂಗಮರೆಂದೂ ಗೌರವಿಸಲಾಗುತ್ತಿತ್ತು. ಅವರು ಜನಿವಾರ

ಮತ್ತು ಚರಲಿಂಗ (ಸ್ಥಾವರಲಿಂಗದ ಚಿಕ್ಕ ರೂಪ) ಗಳೆರಡನ್ನೂ ಧರಿಸುತ್ತಿದ್ದರು. ಗುರು ಬಸವಣ್ಣನವರು ಕ್ರಾಂತಿ ಪುರುಷರಾಗಿ ಲಿಂಗೀ ಬ್ರಾಹ್ಮಣರಿಗೆ ಸೀಮಿತವಾಗಿದ್ದ ಪೂಜೆಯ ಹಕ್ಕನ್ನು ಎಲ್ಲ ಮಾನವರಿಗೆ, ಜಾತಿ ಮತ ಮತ್ತು ಸ್ತ್ರೀ - ಪುರುಷರೆಂಬ ಭೇದವಿದಲ್ಲದೆ ನೀಡಬೇಕೆಂಬ ಕಳಕಳಿಯುಂಟಾಯಿತು. ಆದರೆ ಅದಕ್ಕೆ ವೈದಿಕ ಶಾಸ್ತ್ರಗಳ ಪ್ರಕಾರ ಸಾಧ್ಯವಿರಲಿಲ್ಲ. ಶೈವ ಶಾಸ್ತ್ರಗಳು ಸಹ ವೈದಿಕ ಶಾಸ್ತ್ರಗಳ ಪ್ರಭಾವದಲ್ಲೇ ಕಾರ್ಯ ಮಾಡುತ್ತಿದ್ದವು.

ಈ ಹಿನ್ನೆಲೆಯಲ್ಲೇ ಗುರು ಬಸವಣ್ಣನವರು ವೈದಿಕ - ಶೈವ ಎರಡೂ ಮಾರ್ಗಗಳನ್ನು ತಿರಸ್ಕರಿಸಿ, ಹೊರಬಂದು ಹೊಸಧರ್ಮ - ಲಿಂಗಾಯತವನ್ನು ಕೊಟ್ಟರು. ಅದನ್ನು ಶರಣ ಮೋಳಿಗೆ ಮಾರಯ್ಯನವರು ಸ್ಪಷ್ಟವಾಗಿ ಹೇಳುತ್ತಾರೆ.

ಶುದ್ಧ ಶೈವವ ಹೊದ್ದದೆ, ಪೂರ್ವ ಶೈವವನಾಚರಿಸದೆ
ಮಾರ್ಗ ಶೈವವ ಮನ್ನಣೆಯ ಮಾಡದೆ, ವೀರಶೈವವನಾರಾಧಿಸದೆ
ಆದಿ ಶೈವವನನುಕರಿಸದೆ, ಭೇದಿಸಬಾರದ ಲಿಂಗ ಕರದಲ್ಲಿದ್ದು
ಕಂಗಳಿನಲ್ಲಿ ನಿಂದು, ಮನದಲ್ಲಿ ಸಿಂಹಾಸನಂಗೆಯ್ದು

ಇಷ್ಟಲಿಂಗಯೋಗ ಉಳಿದೆಲ್ಲ ಮಾರ್ಗಗಳಿಗಿಂತಲೂ ಭಿನ್ನವಾಗಿ ಇರುವಂಥದು ಎಂಬುದು ಇದರಿಂದ ಸಿದ್ಧವಾಗುವುದು.

ಶ್ರೀ ಹಾನಗಲ್ ಕುಮಾರ ಸ್ವಾಮಿಗಳು ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸ್ಥಾಪಿಸಿದ ನಂತರ ಮೊಟ್ಟಮೊದಲ ಅಧಿವೇಶನವು 1903ರಲ್ಲಿ ಧಾರವಾಡದಲ್ಲಿ ಜರುಗಿತು. ಆಗ ಒಂದು ನಿರ್ಣಯನನ್ನು ಕೈಗೊಳ್ಳಲಾಯಿತು. ಅಂದಿನ ಲಿಂಗಾಯತ ಸಮಾಜದ ಮುಖಂಡರ ಗುರಿ ಹಿಂದು ಸಮಾಜ ವ್ಯವಸ್ಥೆಯಲ್ಲಿ ತಾವೂ ಬ್ರಾಹ್ಮಣರ ಸಮಾನರು ಎಂದು ಸಾಧಿಸುವುದಾಗಿತ್ತು.

"ವೀರಶೈವ ಮತವು ನಿಗಮಾಗಮೋಪನಿದ್ಭಾಷ್ಯ ಪ್ರತಿಪಾದಿತ ತತ್ತ್ವದಿಂದ ಅನಾದಿ ಸಂಸಿದ್ಧವೆಂತಲೂ ಶ್ರೀ ಬಸವೇಶ್ವರ ದೇವರು ಈ ಮತವನ್ನು ಪ್ರಚಾರ ಪಡಿಸಿದವರೇ ಹೊರತು ಸ್ಥಾಪಕರಲ್ಲ ವೆಂಬುದು ಶಿಲಾ ಲೇಖಾದಿ ಪ್ರಮಾಣಗಳಿಂದ ಸಿದ್ಧವಾಗುತ್ತದೆಂತಲೂ ಈ ಮಹಾಸಭೆಯವರು ಖಂಡಿತ ಹೇಳುತ್ತಾರೆ."

ಈ ನಿರ್ಣಯಕ್ಕೆ ಕಾರಣಗಳೇನಿರಬಹುದು?

1. ವಚನ ವಾಙ್ಮಯವೆಂಬ ಶ್ರೇಷ್ಠ ಸಾಹಿತ್ಯವು ಲಭ್ಯವಾಗಿರದೆ ಇದ್ದುದು

2. ಬೆಳಕಿಲ್ಲದ ಗಾಢಾಂಧಕಾರದಲ್ಲಿ ಕೈಗೆ ಸಿಕ್ಕಿದ್ದನ್ನು ಹಿಡಿದುಕೊಳ್ಳುವಂತೆ, ಪ್ರವಾಹದಲ್ಲಿ ಕೊಚ್ಚಿ ಹೋಗುವವ ಹುಲ್ಲುಕಡ್ಡಿಯನ್ನೂ ಆಸರೆಯಾಗಿ ಹಿಡಿದುಕೊಳ್ಳುವಂತೆ, ಶೂದ್ರತ್ವದ ಪ್ರವಾಹದಲ್ಲಿ ಕೊಚ್ಚಿ ಹೋಗಲು ಬಯಸದೆ ನಿಗಮಾಗಮಗಳ ಆಸರೆಯನ್ನು ಪಡೆಯುವ ಪ್ರಯತ್ನ.

ಕೆಲವರಿಗೆ ತಮ್ಮ ಧರ್ಮವು ಬಹಳ ಪುರಾತನ ಎಂಬ ಸಂತೋಷವೂ ಪ್ರಾಪ್ತಿಯಾಗಿರಲು ಸಾಧ್ಯ. ವಚನ ಸಾಹಿತ್ಯವು ಬೆಳಕಿಗೆ ಬರಲಾರಂಭಿಸಿತು. ಆಗ ಮರುಚಿಂತನೆ ಪ್ರಾರಂಭವಾಯಿತು. 1940ರಲ್ಲಿ ದಾವಣಗೆರೆಯಲ್ಲಿ ನಡೆದ ಮಹಾಸಭೆಯ ಸಮಾವೇಶದಲ್ಲಿ ಇನ್ನೊಂದು ಗೊತ್ತುವಳಿ ಸ್ವೀಕರಿಸಲಾಯಿತು.

"ಲಿಂಗಾಯತ ಮತ್ತು ಹಿಂದೂ; ಲಿಂಗಾಯತರು ತಾವು ಹಿಂದುಗಳೆಂದು ಹೇಳಿಕೊಳ್ಳಬಾರದೆಂಬುದನ್ನು ಲಕ್ಷ್ಯದಲ್ಲಿಟ್ಟು ಕೊಳ್ಳುವುದು ಅಗತ್ಯವಾಗಿದೆ. ಲಿಂಗಾಯತರು "ಹಿಂದು"ಗಳಲ್ಲವೆಂದೇ ಬಹುಜನ ಮುಖಂಡರ ಅಭಿಪ್ರಾಯವಾಗಿದೆ. ಹಿಂದು ಧರ್ಮವೆಂದರೆ ಚತುರ್ವರ್ಣದ, ಚತುರಾಶ್ರಮಗಳುಳ್ಳ ಧರ್ಮವು. ಜೈನ ಶೀಖ ಧರ್ಮಗಳಂತೆ ಲಿಂಗಾಯತ ಧರ್ಮವೂ ಸ್ವತಂತ್ರ ಧರ್ಮವಾಗಿದೆಯೆಂದೇ ಸ್ಪಷ್ಟವಾಗಿದೆ."

1904ರಿಂದ 1940ರ ಮಧ್ಯದ ಕಾಲಾವಧಿಯಲ್ಲಿ ಬಹುದೊಡ್ಡ ವೈಚಾರಿಕ ಬದಲಾವಣೆಯಾಯಿತಲ್ಲ. ಈ ಬದಲಾವಣೆಗೆ ಕಾರಣಗಳನ್ನು ಹೀಗೆ ಊಹಿಸಬಹುದು.

19ನೆಯ ಶತಮಾನದಲ್ಲಿ ಬಹುದೊಡ್ಡ ಸಾಮಾಜಿಕ ಪರಿವರ್ತನೆ ದೇಶದಾದ್ಯಂತ ಆಗ ತೊಡಗಿತು. ಹಿಂದು ಸಮಾಜದ ಬಹುದೇವತೋಪಾಸನೆ, ಮೂಢ ನಂಬಿಕೆಯ ವಿರುದ್ಧ ಏಕದೇವೋಪಾಸನೆಯ ಪ್ರಚಾರ ಆರ್ಯ ಸಮಾಜ, ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ, ಇವುಗಳಿಂದ

ನಡೆಯಿತು. ಸತಿ ಸಹಗಮನದ ವಿರುದ್ಧ ಚಳುವಳಿ, ವಿಧವಾ ವಿವಾಹಕ್ಕೆ ಅವಕಾಶ, ಅಸ್ಪೃಶ್ಯತೆಯ ವಿರುದ್ಧ ಹೋರಾಟ ಇತ್ಯಾದಿ ನಡೆದಾಗ ವೈದಿಕ ಧರ್ಮದ ದೋಷ ದೌರ್ಬಲ್ಯ ಲಿಂಗಾಯತ ಮುಖಂಡರಿಗೆ ತಿಳಿದವಲ್ಲದೆ ತಮ್ಮ ಸಮಾಜದಲ್ಲಿ ಅನೇಕ ಪ್ರಗತಿಪರ ವಿಚಾರಗಳು (ಬ್ರಿಟಿಷ್ ಶಿಕ್ಷಣದ ಫಲವಾಗಿ ಅಲ್ಲದೆ) ಸಹಜವಾಗಿ ಅಂತರ್ಗತವಾಗಿರುವುದು ಅಚ್ಚರಿ ಹುಟ್ಟಿಸಿರಲೂಬಹುದು. ಸಿ.ಪಿ. ಬ್ರೌನ್ ಎನ್ನುವ ಬ್ರಿಟಿಷ್ ವಿದ್ವಾಂಸರೋರ್ವರು 175 ವರ್ಷಗಳ ಹಿಂದೆಯೇ ಲಿಂಗಾಯತ ಸಮಾಜದ ಪ್ರಗತಿಪರ ಆಚರಣೆ ಕುರಿತು ಲೇಖನವನ್ನು ಬರೆದಿದ್ದಾರೆ.

ಅಂತೂ ಲಿಂಗಾಯತ ಸಮಾಜದಲ್ಲಿ ಎಚ್ಚರವು ಮೂಡ ತೊಡಗಿತು. ಪ್ರೊ. ಎಂ.ಆರ್. ಸಾಖರೆಯವರು ಈ ಬಗ್ಗೆ ಲಿಂಗಧಾರಣ ಚಂದ್ರಿಕೆ ಎಂಬ ಒಂದು ಗ್ರಂಥಕ್ಕೆ ಪ್ರೌಢ ಮುನ್ನುಡಿಯನ್ನು ಬರೆದು ಲಿಂಗಾಯತ ಧರ್ಮದ ವಿಶೇಷತೆ ಕುರಿತು ವಿವರಿಸಿದ್ದಾರೆ. ಪುರೋಹಿತ ಶಾಹಿಯ ಕೈವಾಡ ಎಷ್ಟು ಸ್ವಾರ್ಥಪರವಾಗಿರುತ್ತದೆ ಎಂದರೆ ಲಿಂಗಾಯತ ಎಂಬ ಶ್ರೇಷ್ಠ ಹಾಗೂ ಸ್ವತಂತ್ರ ಧರ್ಮಕ್ಕೆ ವೀರಶೈವ ಎಂಬ ಚಿಕ್ಕ ಶೈವ ಪ್ರಭೇದದ ಹಣೆಪಟ್ಟಿ ಅಂಟಿಸಿ, ಸಮಾಜವನ್ನು ದಿಕ್ಕು ತಪ್ಪಿಸಿದ್ದೇ ಜ್ವಲಂತ ಉದಾಹರಣೆ.

ಕರ್ನಾಟಕದ ಅತ್ಯಂತ ಪ್ರತಿಭಾನಿತ್ವ ವ್ಯಕ್ತಿ ಶ್ರೇಷ್ಠರಲ್ಲಿ ಡಾ|| ಡಿ.ಸಿ. ಪಾವಟೆ ಅವರೊಬ್ಬರು. ಶಿಕ್ಷಣ ತಜ್ಞ, ಸಮರ್ಥ ಆಡಳಿತಗಾರರಾಗಿ ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಯ ಸಮಯದಲ್ಲಿ ಅದರ ಉಪಕುಲಪತಿಯಾಗಿ, ವಿಶ್ವ ವಿದ್ಯಾನಿಲಯಕ್ಕೆ ಅಂತರರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟ ಧೀಮಂತ ವ್ಯಕ್ತಿ ಅವರು. ಪಂಜಾಬ ರಾಜ್ಯದ ರಾಜ್ಯಪಾಲರಾಗಿ ರಾಜಕೀಯ ಅನಿಶ್ಚಿತತೆಯನ್ನು ಸಮರ್ಥವಾಗಿ ನಿಭಾಯಿಸಿ ಪಂಜಾಬ ರಾಜ್ಯದ ಅಭಿವೃದ್ಧಿಗೆ ನಾಂದಿ ಹಾಡಿದವರು ಡಾ|| ಪಾವಟೆಯವರು ದಿ. 23-12-1973ರಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಇವರ ಒಂದು ಲೇಖನ, *History of Lingayat Religion* ಪ್ರಕಟವಾಯಿತು. ಅದರ ಸಾರಾಂಶ ಹೀಗಿದೆ.

"ನಾನು ಹಿಂದೆ 9 ವರ್ಷ ವೀರಶೈವ ಮಹಾಸಭಾ ಅಧ್ಯಕ್ಷನಾಗಿದ್ದೆ. ಆ ಕಾಲದಲ್ಲಿ ಲಿಂಗಾಯತ ಧರ್ಮದ ಇತಿಹಾಸ ತಿಳಿದುಕೊಳ್ಳಲು ಹಲವಾರು ಗ್ರಂಥಗಳನ್ನೋದುವ ಅವಕಾಶ ನನಗೆ ಲಭ್ಯವಾಯಿತು. ಈ ಗ್ರಂಥಗಳಲ್ಲೂ ಬಸವೇಶ್ವರರೇ ಲಿಂಗಾಯತ (ವೀರಶೈವ) ಧರ್ಮದ ಸ್ಥಾಪಕರೆಂದು ಪ್ರಸ್ತಾಪಿತವಾಗಿದೆ. ಮದ್ರಾಸ್ ವಿಶ್ವವಿದ್ಯಾನಿಲಯದ ಇತಿಹಾಸ ಹಾಗೂ ಪುರಾತತ್ತ್ವ "ದಕ್ಷಿಣ ಭಾರತದ ಇತಿಹಾಸ" ಎನ್ನುವ ಗ್ರಂಥ ನನ್ನ ದೃಷ್ಟಿಯಲ್ಲಿ ವಿಶ್ವಾಸಾರ್ಹವಾದುದು. ಅವರು ಅದರಲ್ಲಿ ಹೀಗೆ ಹೇಳುತ್ತಾರೆ:

ಕಲ್ಯಾಣ ರಾಜ್ಯವಾಳುತ್ತಿದ್ದ ಕಲಚೂರಿ ವಂಶದ ಅರಸು ಬಿಜ್ಜಳನ ಪ್ರಧಾನ ಮಂತ್ರಿ ಬಸವಣ್ಣ, ಈ (ಲಿಂಗಾಯತ) ಧರ್ಮದ ಸ್ಥಾಪಕರೆಂದು ಸಾಮಾನ್ಯವಾಗಿ ಗಣಿಸಲಾಗುತ್ತಿದೆ. ಆದರೆ ಲಿಂಗಾಯತರಲ್ಲಿ ಸಂಪ್ರದಾಯಸ್ಥರು ಇದನ್ನು ವಿರೋಧಿಸುತ್ತಾರಲ್ಲದೆ ಈ ಈ ಧರ್ಮವು ಬಹಳ ಪ್ರಾಚೀನವಾದದ್ದೆಂದು ಶಿವನ ಐದು ಮುಖಗಳಿಂದ ಉದ್ಭವಿಸಿದ ಏಕೋರಾಮ, ಪಂಡಿತಾರಾಧ್ಯ, ರೇವಣ, ಮರುಳ, ವಿಶ್ವಾರಾಧ್ಯ ಎಂಬ ಪಂಚ ಆಚಾರ್ಯರು ಈ ಧರ್ಮವನ್ನು ಸ್ಥಾಪಿಸಿರುವರೆಂದೂ ಬಸವನು ಈ ಧರ್ಮವನ್ನು ಪುನರುಜ್ಜೀವನ ಗೊಳಿಸಿದನೆಂದೂ ಹೇಳುತ್ತಾರೆ. ಆದರೆ ಮೇಲೆ ಹೆಸರಿಸಿದ ಐದು ಆಚಾರ್ಯರೆಲ್ಲರೂ ಬಸವಣ್ಣನ ಸಮಕಾಲೀನರು. ಅವರಲ್ಲಿ ಕೆಲವರು ಹಿರಿಯರು ಇನ್ನು ಕೆಲವರು ಕಿರಿಯರು ಎನ್ನುವ ವಸ್ತುಸ್ಥಿತಿ ನಮಗೆ ಮನವರಿಕೆಯಾಗುತ್ತದೆ.

ಈ ನೂತನ ಧರ್ಮವು ದಕ್ಷಿಣದ ಹಲವಾರು ಭಾಗಗಳಲ್ಲಿ ತನ್ನ ಅಧಿಕಾರದಿಂದ ಬೇರು ಬಿಡಬೇಕೆನ್ನುವ ತೊಘಲಕನ ಪ್ರಯತ್ನ ಅಯಶಸ್ವಿಯಾಗುವಂತೆ ಮುಸಲ್ಮಾನ ಧರ್ಮಕ್ಕೆ ಯೋಗ್ಯ ಪ್ರತಿಸ್ಪರ್ಧಿಯಾಗಿ ರಾಜಕೀಯ ಚಾಲನ ಶಕ್ತಿ ನೀಡಿದ್ದು ಸಣ್ಣ ಮಾತೇನಲ್ಲ. ಪ್ರಥಮತಃ ವಿಜಯನಗರ ಸಾಮ್ರಾಜ್ಯವು ಸಂಗಮ ವಂಶದ ರಾಜರುಗಳಿಂದ 1336 ರಿಂದ 1485ರವರೆಗೆ ಆಳಲ್ಪಟ್ಟು ಇತ್ತೀಚೆಗೆ ಈ ರಾಜ ವಂಶದ ಬಗ್ಗೆ ಪುಸ್ತಕವೊಂದನ್ನು ಬರೆದ ಇತಿಹಾಸದ ಪ್ರಾಧ್ಯಾಪಕರೊಬ್ಬರು ವಿಜಯನಗರದ ರಾಜ್ಯವನ್ನಾಳಿದ ರಾಜರೆಲ್ಲರೂ ಲಿಂಗಾಯತರಾಗಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಆರಂಭದಿಂದ 1920ನೇ ಇಸವಿಯವರೆಗೂ ಪಂಚಾಚಾರ್ಯರು ಬಸವೇಶ್ವರನ ಅನುಯಾಯಿಗಳೊಂದಿಗಿರುವ ವ್ಯತ್ಯಾಸವನ್ನು ಮರೆತು ಸೌಹಾರ್ದಯುತವಾಗಿಯೇ ಬಾಳುತ್ತಿದ್ದರು. ಲಿಂಗಾಯತರ್‍ಯಾರು ವೇದಾಧ್ಯಯನದ ಬಗೆಗೆ ತಲೆ ಕೆಡಿಸಿಕೊಂಡಿರಲಿಲ್ಲ. 1920ರಿಂದೀಚೆಗೆ ನಮ್ಮ ರಾಷ್ಟ್ರೀಯ ನೀತಿಯಾಗಿ ಅಂಗೀಕೃತವಾದ ಬಸವಾನುಯಾಯಿಗಳ ಜನ ಸಮೂಹದಿಂದ

ಅದೇಕೆ ಪ್ರತ್ಯೇಕವಾಗುತ್ತಿದ್ದಾರೋ, ಅವರಿಗದ್ಯಾವ ಪಿಶಾಚಿ ಬಡಿದಿದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಲಿಂಗಾಯತರೊಳಗೇ ತಾವು ಬ್ರಾಹ್ಮಣರಾಗಿರುವುದಾಗಿ ಅವರೇನಾದರೂ ತಿಳಿದುಕೊಂಡಿದ್ದರೆ ಅದರಂಥ ದುಃಖಕರ ಸಂಗತಿ ಮತ್ತೊಂದಿಲ್ಲ.

ಲಿಂಗಾಯತರು ಒಂದು ವೇಳೆ ತಾವು ಹಿಂದುಗಳೆಂದು ಪರಿಭಾವಿಸಿದರೆ ಇಂದಿನ ಕಾನೂನಿನ ದೃಷ್ಟಿಯಲ್ಲಿ ಅವರು ಶೂದ್ರ ವರ್ಗದಲ್ಲಿ ಪರಿಗಣಿತವಾಗುತ್ತಾರೆ. ವಾಸ್ತವಿಕವಾಗಿ, ಲಿಂಗಾಯತರು ಜೈನ, ಸಿಖ್ ಹಾಗೂ ಬೌದ್ಧ ಧರ್ಮಗಳ ಸಮಾಜದಂತೆ ತಮ್ಮನ್ನು ಕೂಡ ಹಿಂದುಗಳಿಂದ ಪ್ರತ್ಯೇಕ ಧರ್ಮೀಯರೆಂದು ಪರಿಗಣಿಸಬೇಕೆಂದು ಈ ಶತಮಾನದ ಇಪ್ಪತ್ತರ ದಶಕದ ಮೊದಲ ಭಾಗದಲ್ಲಿ ಭಾರತ ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾದ ಸಂಬಂಧವಾಗಿ ಇನ್ನೂ ಸರಕಾರದ ಯಾವುದೇ ಆಜ್ಞೆ ಹೊರಟಿಲ್ಲವಾದರೂ ಕೆಲವು ವರ್ಷಗಳಿಂದೀಚೆ ಸರ್ಕಾರವು ಲಿಂಗಾಯತರನ್ನು ಹಿಂದುವೆಂದು ಪರಿಗಣಿಸುತ್ತಲಿಲ್ಲ. ಇತ್ತೀಚೆಗೆ ಭಾರತೀಯ ಸಂಸತ್ತು ಹಿಂದೂ ವಿವಾಹ ಕಾಯ್ದೆ, ಹಿಂದೂ ಅಲ್ಪವಯಿ ಸಂರಕ್ಷಣಾಧಾರ ಕಾಯ್ದೆಗಳನ್ನು ರಚಿಸುವಾಗ ಲಿಂಗಾಯತ, ಬೌದ್ಧ, ಜೈನ, ಬ್ರಹ್ಮೋ ಸಮಾಜ ಧರ್ಮೀಯರನ್ನು, ಆ ಧರ್ಮಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ಅವುಗಳಿಗಾಗಿಯೇ ಬೇರೆ ಕಾನೂನುಗಳನ್ನು ಮಾಡಿದೆ."

ಡಾ|| ಡಿ.ಸಿ. ಪಾವಟೆಯವರ ಈ ಲೇಖನ ಬಹಳ ಮಹತ್ವಪೂರ್ಣ ಎಂಬುದು ಓದುಗರಿಗೆ ಖಂಡಿತಾ ಮನವರಿಕೆಯಗುವುದು. ಪಂಚಾಚಾರ್ಯರ ಕಾಲ್ಪನಿಕ ಸೃಷ್ಟಿ 1920ರ ನಂತರದ್ದು ಎಂಬುದು ಖಚಿತವಾಗುತ್ತದೆ. ಲಿಂಗಾಯತರು ಹಿಂದುಗಳಲ್ಲ ಎಂಬ ಅಭಿಪ್ರಾಯ ಆಗಲೇ ಮೂಡಿತ್ತೆಂಬುದುದಲ್ಲದೆ, ಲಿಂಗಾಯತವು ಪ್ರತ್ಯೇಕ ಧರ್ಮ ಎಂದು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಕೊಡಲಾಗಿತ್ತೆಂಬುದು ತಿಳಿದು ಬರುತ್ತದೆ (ಒಗ್ಗಟ್ಟಿನಿಂದ ಹೋರಾಡದೆ ಇರುವುದು, ವೀರಶೈವ ಪದವನ್ನು ಜೊತೆಗೆ ತಗುಲಿಸಿ ಕೊಂಡು ಲಿಂಗಾಯತರು ಸ್ವತಂತ್ರ ಧರ್ಮದ ಮಾನ್ಯತೆಗೆ ಪ್ರಯತ್ನಿಸುತ್ತಿರುವುದು, ತಮ್ಮ ತಮ್ಮಲ್ಲೇ ಒಳಪಂಗಡಗಳನ್ನು ಒಡೆಯುವುದು ಇತ್ಯಾದಿ ಕಾರಣಗಳಿಂದ ಸುಮಾರು 90 ವರ್ಷ ಪ್ರಯತ್ನಿಸಿದರೂ ಇನ್ನೂ ಯಶಸ್ಸು ಸಾಧಿಸದಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ - ಮಾತಾಜಿ)

Hindu Law, N.R. Raghavachariar's Revised by Prof. S.Venkataraman,Publisher Madras Law Journal office, Mylapore,Madras-04, Page 32-33 Hindu Law now not a Law of all Hindus alone: A concept of Hindu Law as administered by the courts over the years show that it is not coincidental with religious beliefs. Apropos this aspect the Andhra Pradesh High Court observes " Hindu Law governed not only Hindus but also Sikhs, Jains and Buddists. It governed Lingayats a body of dissenters who deny the validity of caste distinctions."

ಈ ಉಲ್ಲೇಖವು ಬಹಳ ಮಹತ್ವಪೂರ್ಣ. ಲಿಂಗಾಯತರು ಸಿಖ್, ಜೈನ್, ಬೌದ್ಧರಂತೆ ಸಾಂಪ್ರದಾಯಿಕ ಹಿಂದೂ ಧರ್ಮದಿಂದ ಬೇರೆಯೇ ಇರುವವರು; ಜಾತಿ ಪದ್ಧತಿಯನ್ನು ಮನ್ನಿಸುವವರಲ್ಲ ಎಂಬ ಮಾತು ಗಮನಾರ್ಹ. ಯಾವ ವಿಷಯದಲ್ಲಿ ಸಹ ಮತವಿದೆಯೋ ಅಲ್ಲಿ ಮಾತ್ರ ಹಿಂದು ಕಾನೂನು ಲಿಂಗಾಯತರಿಗೂ ಅನ್ವಯವಾಗುತ್ತದೆ.

Principles of Hindu Law ಎಂಬ ಕಾನೂನು ಗ್ರಂಥದಲ್ಲಿ ಕೆಲವು ಸಂಗತಿಗಳು ದಾಖಲಾಗಿವೆ. ಪುಟ. 697, Shudras ಎಂಬ ಶೀರ್ಷಿಕೆಯಡಿಯಲ್ಲಿ ಕ್ರಮ ಸಂಖ್ಯೆ 627

Lingayats:- The Lingayats who are originally Hindus are a body of dissenters and the founder of their religion was one Basava who was born about A.D.1100. They acknowledge only one God, Shiva, and reject the other two of the Hindu Triad. They revere the Vedas, but disregard the later commentaries on which the Brahmans rely. Their faith propose to be the primitive Hindu faith. Cleared of all

priestly mysticisms.they deny the supremacy of Brahmans, and pretend to be free from caste distinctions, though at the present day caste is in fact observed amongst them. They declare that there is no need for sacrifices, penances, pilgrimages and fasts. The cardinal principles of the faith is an unquestioning belief in the efficacy of the Lingam. The image which was always been regarded as symbolical of the God Shiva is worn on body. Mysore, the southern Mahratta country, and the Bellary District contain most of these Lingayats. Though the sacred thread is not worn by the Lingayats, a ceremony called Deeksha ought to be performed about their eighth year but as in the case of Upanayanam it is often performed much later. The sacred mantra is whispered in the ear by their Guru and this ceremony corresponds to Upanayanam among the Brahmans. Lingayats, whose only God is Shiva and who unacknowledge the authority of the Vedas, are bound by Hindu law except in so far as it is modified by custom (60).

In the Madras case cited above the Lingayats of Madras were apparently not regarded as shudras. In Bombay state they are shudras, and not vaishyas [Gopal vs Hanmant (1879) 3 Bom. 273 Fakir gouda V Gangi (1898) 22, Bom, 277]

As to Lingayats in Mysore, see the under mentioned case (p1) [Sanganna gouda VS Kalkangouda a (60)

The Hindu Marriage Act ಬಗ್ಗೆ ಮಾತನಾಡುತ್ತ ಹೀಗೆ ಹೇಳಲಾಗಿದೆ. P. 724

2 (1) This Act applies –

A) to any person who is a Hindu by religion in any of its forms or developments, including a Virashaiva, a Lingayat or a follower of the Brahmo, Prathana or Arya Samaj

b) to any person who is a Buddist, Jaina, or Sikh by religion

ಈ ವಿವರಣೆ ಬಹಳ ಮಹತ್ವ ಪೂರ್ಣ.

1. ಲಿಂಗಾಯತರು ಹಿಂದುಗಳೇ ಆಗಿದ್ದಿದ್ದರೆ ಅವರನ್ನು ಪ್ರತ್ಯೇಕವಾಗಿ ಹೆಸರಿಸುವ ಅಗತ್ಯವಿರುತ್ತಿರಲಿಲ್ಲ. ಇವರು ಬೌದ್ಧರು, ಜೈನರು , ಸಿಖ್ಖರಂತೆ ಬೇರೆಯೇ ಆದ ಕಾರಣ ವಿಶೇಷವಾಗಿ ಗುರುತಿಸಲಾಗಿದೆ.

2. a Virashaiva, a Lingayat ಎಂದು ಬೇರೆ ಬೇರೆಯಾಗಿ ಹೇಳಲಾಗಿದೆ. Virashaiva or Lingayat ಎಂದಾಗಲಿ, Virashaiva / Lingayat ಎಂದಾಗಲಿ ಬರೆದಿಲ್ಲ. Hindu Marriage Billದಲ್ಲಿ ಹೀಗೆ ಹೇಳಲಾಗಿದೆ.

" At present, Hindu Law applies (i) to Hindus by birth, and Hindus by religion, that is to say, to converts and re-converts to Hinduism. (ii) to illegitimate children where both parents are Hindus. (iii) to illegitimate children where mother is a Hindu and children are brought up as Hindus. (iv) Brahmos, Arya Samajists, Lingayats and

to persons who may be regarded as Hindu unless they can show some valid local, tribal or family custom to the contrary and (v) to Jains, Sikhs and Buddhists.

ಹಿಂದು ವಿವಾಹ ಕಾಯ್ದೆಯಲ್ಲಿ ಪುನಃ ಪುನಃ ಲಿಂಗಾಯತದ ಹೆಸರು ಜೈನ್, ಸಿಖ್, ಬೌದ್ಧರ ಆಚರಣೆಯ ಜೊತೆಗೆ ಉಲ್ಲೇಖವಾಗುವುದನ್ನು ನೋಡಿದಾಗ ಲಿಂಗಾಯತವು ಹಿಂದು ಆಚಾರ ಸಂಹಿತೆಯಿಂದ ಬೇರೆಯೆ ಆಗಿದೆ ಎಂಬುದು ಸ್ಪಷ್ಟವಾಗುತ್ತದೆಯಲ್ಲವೆ?

ತಂದೆ ಹಿಂದು, ತಾಯಿ ಕ್ರಿಶ್ಚಿಯನ್ ಇದ್ದು ಇಬ್ಬರೂ ವಿಶೇಷ ವಿವಾಹ ಕಾಯ್ದೆ 1945ರ ಪ್ರಕಾರ ವಿವಾಹವಾಗಿರುತ್ತಾರೆ. ಅವರ ಮಗನಿಗೆ ಅವಿಭಕ್ತ ಕುಟುಂಬದ ಆಸ್ತಿಯ ಹಕ್ಕು ಇದೆಯೇ? ಎಂಬ ಪ್ರಶ್ನೆ ಎದುರಾದಾಗ ಸುಪ್ರೀಮ್ ಕೋರ್ಟ್ ಹೀಗೆ ತೀರ್ಪಿತ್ತಿದೆ.

ಸಹ ಭಾಗಿತ್ವ ಕುರಿತು ಹಿಂದು ಕಾನೂನು ಹೀಗೆ ಹೇಳುತ್ತದೆ. ತಂದೆಯೇ ಕುಟುಂಬದ ಒಡೆಯ. ಮಕ್ಕಳು ಹುಟ್ಟಿನಿಂದಲೇ ಉತ್ತರಾಧಿಕಾರದ ಹಕ್ಕು ಪಡೆಯುತ್ತಾರೆ. ಆದರೆ ಈ ನಿಯಮವು,

(iv) ಜೈನರ್, ಬೌದ್ಧರು, ಸಿಖ್ಖರು, ನಂಬೂದರಿ ಬ್ರಾಹ್ಮಣರು ಮತ್ತು ಲಿಂಗಾಯತರಿಗೆ ಇದು ಅನ್ವಯವಾಗುವುದಿಲ್ಲ.

(V) ಹಾಗೆಯೇ ಹುಟ್ಟಿನಿಂದ ಹಿಂದು ಇದ್ದರೂ ಅದನ್ನು ತ್ಯಜಿಸಿದವರಿಗೆ , ತ್ಯಜಿಸಿದ ಬಳಿಕ ಪುನಃ ವಿಧ್ಯುಕ್ತವಾಗಿ ವಾಪಸು ಬರದವರಿಗೆ ಅನ್ವಯವಾಗುವುದಿಲ್ಲ

iv ಈ ತೀರ್ಪು ತಿರುಕನಗೌಡ v/s ಶಿವಪ್ಪ(1943) ಬಾಂಬೆ, 706, 45 Bom L.R. 992.

ಹಿಂದು ಕಾನೂನು ಪುನಃ ಪುನಃ ಲಿಂಗಾಯತ ಸಮಾಜವನ್ನು ಉಲ್ಲೇಖಿಸುವುದನ್ನು ನೋಡಿದಾಗ ಸಾಂಪ್ರದಾಯಕವಾಗಿ ಲಿಂಗಾಯತ ಧರ್ಮದ ವಿಚಾರ -ಆಚಾರ ಸಂಹಿತೆ ಬೇರೆಯೇ ಇದೆ; ಕೆಲವು ಅಂಶಗಳು ಮಾತ್ರ ವಿವಾಹ ಕಾಯ್ದೆ, ಆಸ್ತಿ ಹಕ್ಕು ಮುಂತಾದ ವಿಷಯಗಳಲ್ಲಿ ಸಮಾನ ಅಂಶಗಳಿಂದ ಕೂಡಿದೆ ಎಂಬುದು ಸಿದ್ಧವಾಗುತ್ತದೆ.

ಹಿಂದು ಕಾನೂನು ಕೆಲವು ವಿಷಯ,ಗಳಲ್ಲಿ ಅನ್ವಯವಾಗುತ್ತದೆ ಎಂದ ಮಾತ್ರಕ್ಕೆ ಲಿಂಗಾಯತವು ಡಾ|| ಚಿದಾನಂದ ಮೂರ್ತಿ ಪ್ರತಿಪಾದಿಸುವಂತೆ ಹಿಂದು ಧರ್ಮ ಅಂಗವಾಗದು. ಉದಾ: ಆಗಮಗಳಲ್ಲಿರುವ 36 ತತ್ವಗಳನ್ನು ವಚನ ವಾಙ್ಮಯ ಸೃಷ್ಟಿಯ ಕ್ರಮ ಹೇಳುವಲ್ಲಿ ಒಪ್ಪುತ್ತೆ ಎಂದ ಮಾತ್ರ ಇಡೀ ಆಗಮಗಳ ವಿಚಾರಧಾರೆಯನ್ನು ಒಪ್ಪುವುದು ಎಂದಲ್ಲ. ಇಸ್ಲಾಂ ಹೇಳಿದಂತೆ ದೇವರು ಒಬ್ಬ ಅವನು ಸರ್ವಶಕ್ತ ಎಂದ ಮಾತ್ರಕ್ಕೆ ಇಸ್ಲಾಮಿನ ಎಲ್ಲ ತತ್ವ, ಆಚರಣೆಗಳನ್ನು ಲಿಂಗಾಯತ ಧರ್ಮ ಒಪ್ಪುತ್ತೆ ಎಂದಲ್ಲ. ಯಾರಾದರೊಬ್ಬ ವ್ಯಕ್ತಿಯ ಮೂಗು ಇನ್ನೊಬ್ಬನ ಮೂಗಿನೊಡನೆ ಹೋಲಿಕೆ ಹೊಂದಿದ್ದರೆ ಇಬ್ಬರೂ ಒಬ್ಬನೇ ವ್ಯಕ್ತಿ ಆಗುವುದಿಲ್ಲವಷ್ಟೇ. ಹಾಗೆ ಹಿಂದೂ -ಲಿಂಗಾಯತ ಬೇರೆ ಬೇರೆ, ಲಿಂಗಾಯತ ವೀರಶೈವ ಸಹ ಬೇರೆ ಬೇರೆಯೇ ಸರಿ. ಈ ಗ್ರಂಥ ರಚನೆಯಾಗಿರುವುದು ಇನ್ನೂ ವಚನ ಸಾಹಿತ್ಯ ಲಭ್ಯವಿಲ್ಲದಾಗ. ದೊರೆತಿದ್ದ ಸಾಹಿತ್ಯವೆಂದರೆ ಭೀಮಕವಿಯ ಬಸವ ಪುರಾಣ, ವಿರುಪಾಕ್ಷ ಪಂಡಿತನ ಚನ್ನಬಸವ ಪುರಾಣ ಮಾತ್ರ. ಒಂದು ಮಹತ್ವ ಪೂರ್ಣ ಮಾತನ್ನು ಲೇಖಕರು ಹೇಳುತ್ತಾರೆ, Much of the good effected by the founder has thus been counteracted, and the Lingayat is gradually becoming more and more like his orthodox Hindu brother. In proof of this tendency it may be noted that, at the time of the census of 1891, there was numerous representations from Lingayats claiming the right to be described as Virashaiva Brahmans. Further, on the occasion of the census of 1901, a complete scheme was supplied to the census authorities professing to show all Lingayat sub divisions in four groups. Viz., Brahman, Kshatriya, Vaishya, and Sudra.It is noted, in the Mysore census Report 1891, that the Lingayats interviewed the Maharaja, and begged that their registration as Virashaiva Brahmans might be directed. The crisis was moved by his highness the Maharaj's Govt. Passing orders the effect that the

Lingayats should not be classed as shudras but should be separately designated by their own name, and that which they were at liberty to call themselves Virshaiva Brahmans." (p 252-253).

The Lingayat faith appears to have spread very rapidly after Basava's death; within 60 years of founder's death it was embraced from Ulavi near Goa to Sholapur, and from Balehalli to Sivaganga."

ಕೆಲವು ಲಿಂಗಾಯತ ಪ್ರಮುಖರು 1891ನೇ ಇಸವಿಯ ಜನಗಣತಿಯಲ್ಲಿ ಲಿಂಗಾಯತರನ್ನು ವೀರಶೈವ ಬ್ರಾಹ್ಮಣರೆಂದು ವರ್ಗೀಕರಿಸಬೇಕೆಂದು, 1901ರ ಜನಗಣತಿಯಲ್ಲಿ ಲಿಂಗಾಯತರನ್ನು ಚತುರ್ವರ್ಣಗಳಲ್ಲಿ ವರ್ಗೀಕರಿಸಲು ಬೇಡಿಕೆ ಸಲ್ಲಿಸಿದ್ದು ಎಂತಹ ದೊಡ್ಡ ಅಪರಾಧ! ಹೀಗಾಗಿ ಬೌದ್ಧರು, ಜೈನರು ಮತ್ತು ಸಿಖ್ಖರು ಸುಲಭವಾಗಿ ಪಡೆದುಕೊಂಡ ಸ್ವತಂತ್ರ ಧರ್ಮದ ಮಾನ್ಯತೆಯನ್ನು (ಅವರು ಪಡೆದುಕೊಂಡ ಧಾರ್ಮಿಕ ಅಲ್ಪಸಂಖ್ಯಾತರ ಸವಲತ್ತನ್ನು) ಸಮಾಜಕ್ಕೆ ಇಲ್ಲದಂತೆ ಮಾಡಿ ಅನ್ಯಾಯ ಮಾಡಿದ್ದಾರೆ. ವೀರಶೈವ ವಾದಿಗಳು ತಾವು ಬ್ರಾಹ್ಮಣರಾಗುವ ಸ್ವಾರ್ಥಕ್ಕೆ ಬಲಿಯಾಗಿ ಇಡೀ ಸಮಾಜಕ್ಕೆ ದ್ರೋಹವೆಸಗಿದ್ದಾರೆ ಎಂದರೆ ತಪ್ಪಾಗದು. ಏಕೆಂದರೆ ಆಗಮೋಕ್ತ ವೀರಶೈವ ಮತಕ್ಕೂ ಮತ್ತು ವಚನೋಕ್ತ ಲಿಂಗಾಯತ ಧರ್ಮಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಈ ಕೃತಕ ಬ್ರಾಹ್ಮಣತ್ವ ಹೊಂದಲು ಲಿಂಗಾಯತರು (ವೀರಶೈವವಾದಿಗಳು) ಮಾಡಿದ ಸಾಹಸ ಅಷ್ಟಿಷ್ಟಲ್ಲ.

1. ತಮ್ಮ ಧರ್ಮ ಬಸವಣ್ಣನವರಿಂದ ಬಂದುದಲ್ಲ ಮೊದಲೇ ಇತ್ತು, ನಿಗಮಾಗಮಗಳಿಂದ ಬಂದುದು ಎಂದು ವಾದಿಸಿದರು.

2. ಇದು ವೇದ ವಿರೋಧಿ, ಬ್ರಾಹ್ಮಣ ವಿರೋಧಿಯಲ್ಲ. ಕೇವಲ ಪ್ರಾಣಿ ವಧೆ ಮಾಡುವ ಯಜ್ಞ -ಯಾಗಾದಿ, ಕರ್ಮಕಾಂಡವನ್ನು ವಿರೋಧಿಸುವುದೇ ವಿನಾ ಜ್ಞಾನಕಾಂಡವನ್ನಲ್ಲ ; ಮಧ್ವರು, ರಾಮಾನುಜರು ಮಾಡಿದಂತೆ ಕೆಲವನ್ನು ಒಪ್ಪಿಕೊಂಡಿದೆ, ಕೆಲವನ್ನು ನಿರಾಕರಿಸುವುದು ಎಂದು ಪ್ರತಿಪಾದಿಸಿದರು.

3. ಲಿಂಗಾಯತ ಧರ್ಮ -ಸಮಾಜಗಳಲ್ಲೂ ಜಾತಿಗಳು ಉಂಟು. ಇದನ್ನೆಲ್ಲ ಸಾಧಿಸಲು ಅನೇಕ ಸಂಸ್ಕೃತ ಶ್ಲೋಕಗಳನ್ನು ಅವರು ಉಲ್ಲೇಖಿಸ ತೊಡಗಿದರು. (ಪುಟ -260)

ಈ ಬಗ್ಗೆ ಥರ್ಸ್ಟನ್ ಹೇಳುತ್ತಾರೆ:

It is unnecessary to weary the reader with the texts and their translations. The object in referring to these latter day accounts of the origin of the Lingayats is to show the modern tendency of tradition to bring Lingayatism into line with Brahmanistic Hinduism. The works referred to by the learned authors appear to be Sanskrit writings of not more than 500 years ago, and cannot be taken as proof that the Lingayat religion is of greater antiquity than the 12th Century, or that it has always been observant of caste distinctions. The persistence with which these points are advanced at the present day is, however, worthy of careful notice. If Lingayatism was an island thrown up within the " boundless sea of Hinduism," it would appear that the waters of the ocean are doing their utmost to undermine its solid foundations." (p-260)

ಗ್ರಂಥ ಕರ್ತರು ಉಲ್ಲೇಖಿಸಿರುವ ಕೆಲವು ಮಾತುಗಳು ಈಗ ಜಾತಿ ಭೇದ ಮಾಡುವ ಲಿಂಗಾಯತರ ಕಣ್ತೆರೆಸುತ್ತವೆ. ಪುಟ - 267

"ಲಿಂಗಾಯತ ಧರ್ಮವು ತೀರಾ ಇತ್ತೀಚೆಗೆ ಸಹ ಇತರ ಜಾತಿಯಿಂದ ಜನರನ್ನು ಸ್ವೀಕರಿಸಿದೆ. 19ನೆಯ ಶತಮಾನದ ಕೊನೆಯಲ್ಲಿ ಧಾರವಾಡ ಜಿಲ್ಲೆಯ ತುಮ್ಮಿನಕಟ್ಟೆ ಎಂಬಲ್ಲಿ ಬಹಳಷ್ಟು ನೇಕಾರ ಜಾತಿಯವರು ಲಿಂಗಾಯತ ಧರ್ಮವನ್ನು ಸ್ವೀಕರಿಸಿದರು. ಉಜ್ಜನಿಯಿಂದ ಬಂದ ಓರ್ವ ಜಂಗಮರು ದೀಕ್ಷೆ ನೀಡಿದರು. ಅವರನ್ನು ಕುರುಹಿನವರು ಎಂದು ಕರೆಯಲಾಗುತ್ತಿದೆ. ಅವರು ತಮ್ಮ ಪೂರ್ವದ ಜಾತಿಯಿಂದ ಎಲ್ಲ ಸಾಮಾಜಿಕ ಸಂಬಂಧಗಳನ್ನು ಕಡಿದುಕೊಂಡಿದ್ದಾರೆ."

ಬಸವಣ್ಣನವರ ಬೋಧೆಯ ಪ್ರಕಾರ ಅತ್ಯಂತ ಕೆಳಗಿನ ಜಾತಿಯವರು ಸಹ ಈ ಸಮುದಾಯ -ವನ್ನು ಸೇರಬಹುದು. ಮತ್ತು ಇತರ ಲಿಂಗಾಯತರೊಡನೆ ಸಮಾನ ಸ್ಥಾನ ಪಡೆಯಬಹುದು. ಅಬ್ಬೆ ಡ್ಯುಬಾಯಿಸ್ ಬರೆಯುತ್ತಾರೆ. "ಅತ್ಯಂತ ಕೆಳ ಶ್ರೇಣಿಯ ಅಸ್ಪೃಶ್ಯನು ಸಹ ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದರೆ ಅವನು ಯಾವ ಬ್ರಾಹ್ಮಣನಿಗೂ ಕಡಿಮೆ ಇಲ್ಲ ಎಂದು ಭಾವಿಸಲಾಗುವುದು. ಎಲ್ಲಿ ಇಷ್ಟಲಿಂಗ ಇರುತ್ತದೋ ಆ ಶರೀರವು ಲಿಂಗದೇವಾಲಯವಾಗುವ ಕಾರಣ ಅಲ್ಲಿ ಜಾತಿ ಭೇದ, ಅಂತಸ್ತು ಭೇದ, ವರ್ಗಭೇದ ಮಾಡುವುದಿಲ್ಲ. ಲಿಂಗಭಕ್ತನಾದ ಅಸ್ಪೃಶ್ಯನ ಗುಡಿಸಲು ಇಷ್ಟಲಿಂಗವಿಲ್ಲದ ಅರಸನ ಅರಮನೆಗಿಂತಲೂ ಶ್ರೇಷ್ಠ ಎಂದು ಭಾವಿಸಲಾಗುವುದು. ಇದು ಧರ್ಮಸ್ಥಾಪಕ ಬಸವಣ್ಣನವರ ಆಶಯ."

ಥರ್ಸ್ಟನ್ ಹೇಳುತ್ತಾರೆ:

"ಆದರೆ ಉಜ್ಜನಿ ಮಠದ ಜಂಗಮರು ಹೇಳುತ್ತಾರೆ ಮಾದರ ಮುಂತಾದ ಅಸ್ಪೃಶ್ಯರು ಲಿಂಗವಂತರಾಗಲು ಸಾಧ್ಯವಿಲ್ಲ ಎಂದು." (ಪುಟ -267)
(ಉಜ್ಜನಿ ಮಠ ಪೀಠವನ್ನು ಸ್ಥಾಪಿಸಿದ ಶರಣ ಮರುಳಸಿದ್ಧರೇ ಮಾದರು ಎಂಬ ಸತ್ಯವನ್ನು ಈ ಮಠದವರು ಮರೆತಿರುವುದು ಸುಸ್ಪಷ್ಟ)

ಹೀಗೆ ವೀರಶೈವವಾದಿಗಳಿಂದಲೇ ಲಿಂಗಾಯತ ಧರ್ಮ ತನ್ನ ಚಲನಶೀಲತೆಯನ್ನು ಕಳೆದುಕೊಂಡಿರುವುದು ಇದರಿಂದ ಮನದಟ್ಟಾಗುತ್ತದೆ. ಗುರು ಬಸವಣ್ಣನವರು ಹಾರುವನಿಂದ ಹೊಲೆಯನವರೆಗೆ, ಬ್ರಾಹ್ಮಣನಿಂದ ಭಂಗಿಯವರೆಗೆ ಎಲ್ಲರಿಗೂ ಧರ್ಮ ಸಂಸ್ಕಾರ ನೀಡಿದರು ಎಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಿರುವ ವಚನ ಸಾಹಿತ್ಯದಿಂದ ತಿಳಿಯುವುದಲ್ಲವೆ?

ಈ ಹಿನ್ನೆಲೆಯಲ್ಲಿ ಆದಷ್ಟು ಬೇಗನೆ ಲಿಂಗಾಯತವು ವೀರಶೈವದ ಸಂಪರ್ಕವನ್ನು ಕಡಿದುಕೊಳ್ಳದಿದ್ದರೆ ತನ್ನ ಅವನತಿಯನ್ನು ತಾನೇ ತಂದುಕೊಳ್ಳುವುದು. ಸಿದ್ಧಾಂತ ಶಿಖಾಮಣಿ ಗ್ರಂಥದ ಮೂಲ ಶ್ಲೋಕ ಮತ್ತು ವ್ಯಾಖ್ಯಾನವಿರುವ ಪುಟ 108, ಪರಿಚ್ಛೇದ 9ರ ಶ್ಲೋಕಗಳ ಪಟ್ಟಿಯನ್ನು ಕೊಡಲಾಗಿದೆ. ಶ್ಲೋಕ 28, 29, 30 ನೋಡಿರಿ. "ವೀರಶೈವ ಬ್ರಾಹ್ಮಣ, ವೀರಶೈವ ಕ್ಷತ್ರಿಯ ಮತ್ತು ವೀರಶೈವ ವೈಶ್ಯರು ತಮ್ಮ ತಮ್ಮ ಜಾತಿಯ ಜನರ ಮನೆಗಳಲ್ಲಿಯೇ ಭೋಜನವನ್ನು ಮಾಡಬೇಕಲ್ಲದೆ ಇತರರ ಮನೆಗಳಲ್ಲಿ ಭೋಜನ ಮಾಡಬಾರದು. ವೀರಶೈವ ಕ್ಷತ್ರಿಯ, ವೀರಶೈವ ವೈಶ್ಯರು ವೀರಶೈವ ಬ್ರಾಹ್ಮಣರಲ್ಲಿ ಭೋಜನ ಮಾಡಬೇಕಲ್ಲದೆ, ಬ್ರಾಹ್ಮಣರು ಕ್ಷತ್ರಿಯ ವೈಶ್ಯರಲ್ಲಿ ಭೋಜನ ಮಾಡಬಾರದು."

ಲಿಂಗಾಯತರು ತೀರಾ ಮಂದಮತಿಗಳಾಗದೆ ಈ ಶ್ಲೋಕ -ವ್ಯಾಖ್ಯಾನದ ಬಗ್ಗೆ ಆಲೋಚಿಸಬೇಕು. ಈ ಪುಸ್ತಕ ದಿ|| ಕಾಶೀನಾಥ ಶಾಸ್ತ್ರಿ ಸಂಪಾದಿತ ಸಿದ್ಧಾಂತ ಶಿಖಾಮಣಿ, ಮೈಸೂರಿನ ಪಂಚಾಚಾರ್ಯ ಎಲೆಕ್ಟ್ರಿಕಲ್ ಪ್ರೆಸ್‌ನಲ್ಲಿ ಮುದ್ರಿತವಾಗಿರುವುದು. ಒಂದೋ, ಈ ವೀರಶೈವ ಆಂಧ್ರ, ತಮಿಳು ನಾಡು, ಕೇರಳ ವೀರಶೈವಗಳಿಗೆ ಸಂಬಂಧ ಪಟ್ಟುದು ಎಂದು ಭಾವಿಸಬೇಕು. ಇಲ್ಲವೇ ವೀರಶೈವ ಪದವನ್ನು ಹೇರಿ ಲಿಂಗಾಯತ ಧರ್ಮ -ಸಮಾಜಗಳನ್ನು ಒಡೆಯುವ ಪಂಚಪೀಠಾಧೀಶರ ಸಂಚು ಎಂದು ಭಾವಿಸಬೇಕು. ಲಿಂಗಾಯತ ಸಮಾಜದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯ, ಶೂದ್ರ ಎಂದು ವಿಂಗಡಿಸಲು ಸಾಧ್ಯವೆ? ಒಂದು ವೇಳೆ ಪಂಚಪೀಠಾಧೀಶರು ವೀರಶೈವ ಬ್ರಾಹ್ಮಣರಾದರೆ ಅವರು ಇನ್ನಿತರ ಲಿಂಗಾಯತರುಗಳಾದ ವೀರಶೈವ ಕ್ಷತ್ರಿಯ (?) ಮತ್ತು ವೀರಶೈವ ವೈಶ್ಯ (?)ರ ಮನೆಯಲ್ಲಿ ಬಿನ್ನಹ ತೀರಿಸಿ ಕುಲಗೆಟ್ಟಿರುವರಲ್ಲವೆ? ಒಂದು ವೇಳೆ ಹಿಂದು ಸಮಾಜದ ವರ್ಣಾಶ್ರಮ ವ್ಯವಸ್ಥೆಯ ಕೆಸರಿನಲ್ಲಿ ಸಿಕ್ಕಿರುವ ಜನಾಂಗಗಳು ಅದರಿಂದ ತಪ್ಪಿಸಿಕೊಳ್ಳಲು ಲಿಂಗಾಯತರಾದ ಬಳಿಕವೂ ಹಳೆಯ ಕೆಸರು ಇಲ್ಲೂ ಮುಂದುವರಿದರೆ ಪ್ರಯೋಜನವೇನು? ಇಂಥದೊಂದು ಪುಸ್ತಕ ಹೊರಬಿದ್ದು ಲಿಂಗಾಯತರಲ್ಲೇ ವರ್ಗೀಕರಣವನ್ನು ಬಾಳೇಹಳ್ಳಿ ಮಠದವರು ಮಾಡತೊಡಗಿದಾಗ ತಾವು ಪ್ರತಿಭಟಿಸಿದ್ದಾಗಿ ಭದ್ರಾವತಿಯ ಲಿಂ|| ಶರಣ. ಮುರಿಗೆಪ್ಪನವರು ಹೇಳಿದ್ದು ನನಗೆ ಇನ್ನೂ ನೆನಪಿದೆ.

ಇಂಥ ಕುತ್ಸಿತ ವಿಚಾರದ ಪುಸ್ತಕ ಹೊರಬಂದಾಗ ಭದ್ರಾವತಿಯಿಂದ ಒಂದು ಬಸ್ಸು ಜನ ಬಾಳೆ ಹೊನ್ನೂರಿಗೆ ಹೋದರಂತೆ. "ಬುದ್ಧಿ, ಬ್ರಾಹ್ಮಣನು ವೈಶ್ಯ, ಶೂದ್ರರ ಮನೆಯಲ್ಲಿ ಊಟ ಮಾಡುವನೇ?" "ಇಲ್ಲ"; ಮಾಡಿದರೆ ಏನಾಗುತ್ತದೆ? "ಅವನು ಕುಲಗೆಡುವನು. ಅವನನ್ನು ಶುದ್ಧೀಕರಿಸಬೇಕಾಗುತ್ತದೆ". ಸ್ವಾಮಿಗಳು ನುಡಿದರು.

"ನೀವು ಲಿಂಗಾಯತರನ್ನು ಚತುರ್ವರ್ಣಗಳಲ್ಲಿ ವಿಂಗಡಿಸಿ ನಮ್ಮನ್ನು ಶೂದ್ರರನ್ನಾಗಿ ಮಾಡಿದ್ದೀರಿ. ಎಷ್ಟೋ ಬಾರಿ ನಮ್ಮ ಮನೆಗಳಲ್ಲಿ ಬಿನ್ನಹ ತೀರಿಸಿದ್ದೀರಿ. ಹೀಗಾಗಿ ಕುಲಗೆಟ್ಟಿದ್ದೀರಿ! ಈಗ ನಿಮ್ಮನ್ನು ಶುದ್ಧೀಕರಿಸುವುದು ಅನಿವಾರ್ಯವಾಗಿದೆ." ಎಂದಾಗ ಸ್ವಾಮಿಗಳು ಬೆಪ್ಪಾದರಂತೆ! ತಾವೇ ಕೊಟ್ಟ ಹಗ್ಗ ತಮ್ಮ ಕೈಕಟ್ಟಬಹುದೆಂಬ ಕಲ್ಪನೆ ಮೊದಲು ಇದ್ದಿರಲಿಕ್ಕಿಲ್ಲವಷ್ಟೇ!!

ಪೂಜ್ಯನಾಚ್ಛೈವಭಕಸ್ಯ ಪುಣ್ಯಾ ಗತಿರವಾಪ್ಯತೇ।
ಅವಮಾನಾನ್ಮಹಾಘೋರೋ ನರಕೋ ನಾತ್ರ ಸಂಶಯಃ ॥ 26 ॥

ಶಿವಭಕ್ತೋ ಮಹಾತೇಜಾಃ ಶಿವಭಕ್ತಿ ಪರಾಙ್ಮುಖಾನ್।
ನ ಸ್ಪೃಶೇನ್ನೈವ ವೀಕ್ಷೇತ ನ ತೈಃ ಸಹ ವಸೇತ್ ಕ್ವಚಿತ್ ॥ 27 ॥

ಯದಾ ದೀಕ್ಷಾಪ್ರವೇಶಃ ಸ್ಯಾಲ್ಲಿಂಗಧಾರಣ ಪೂರ್ವಕಂ।
ತದಾಪ್ರಭೃತಿ ಭಕ್ತೋಽಸೌ ಪೂಜಯೇತ್ ಸ್ವಾಗತಸ್ಥಿತಾನ್ ॥28॥

ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತು ಯೇ।
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ ॥ 29 ॥

ಸ್ವಮಾರ್ಗಾಚಾರವಿಮುಖೈರ್ಭವಿಭಿಃ ಪ್ರಾಕೃತಾತ್ಮಭಿಃ
ಪ್ರೇಷಿತಂ ಸಕಲಂ ದ್ರವ್ಯಮಾತ್ಮಲೀನಮಪಿ ತ್ಯಜೇತ್ ॥ 30 ॥

ಮಹಾತೇಜಸ್ವಿಯಾದ ಶಿವಭಕ್ತನು ಶಿವಭಕ್ತಿ ವಿಮುಖರಾದ ಜನರನ್ನು ಮುಟ್ಟಬಾರದು; ಅವರೊಡನೆ ಸ್ವಲ್ಪವಾದರೂ ವಾಸಮಾಡಬಾರದು. ॥ 27 ॥ ಲಿಂಗಧಾರಣ ಪೂರ್ವಕವಾದ ದೀಕ್ಷೆಯು ಎಂದು ಆಗುವುದೋ, ಅಂದಿನಿಂದ ಪ್ರತಿದಿವಸವೂ ಭಕ್ತನು ವೀರಶೈವಾಗಮ ಪ್ರಕಾರವಾಗಿ ಆಚರಿಸುವ ಪೂಜ್ಯ ಗುರು ಸ್ಥಲ ಮಾಹೇಶ್ವರರನ್ನು ಪೂಜಿಸಬೇಕು. ॥ 28 ॥ ತಮ್ಮ ತಮ್ಮ ಜಾತಿ ಧರ್ಮಾನುಸಾರವಾಗಿ ಆಚಾರದಲ್ಲಿ ನಿಷ್ಠರಾದ ವೀರಶೈವದ್ವಿಜರು ಅಂದರೆ ವೀರಶೈವ ಬ್ರಾಹ್ಮಣರು - ವೀರಶೈವ ಕ್ಷತ್ರಿಯ ವೀರಶೈವ ವೈಶ್ಯರು ತಮ್ಮ ತಮ್ಮ ಜಾತಿಯ ಜನರ ಮನೆಗಳಲ್ಲಿಯೇ ಭೋಜನವನ್ನು ಮಾಡಬೇಕಲ್ಲದೆ ಬ್ರಾಹ್ಮಣರು ಕ್ಷತ್ರಿಯ ವೈಶ್ಯರಲ್ಲಿ ಭೋಜನಮಾಡಬಾರದು. ಶಿವೋಕ್ತಾಂ ಜಾತಿಮರ್ಯಾದಾಂ ಯೋಽತೀತ್ಯ ಭುವಿವರ್ತತೇ। ಸ ಚಂಡಾಲ ಇತ್ತಿ ಜ್ಞೇಯಃ ಸರ್ವಕರ್ಮ ಬಹಿಷ್ಕೃತಃ॥ ಶಿವನಿಂದ ಹೇಳಲ್ಪಟ್ಟ ಜಾತಿಮರ್ಯಾದೆಯನ್ನು ಯಾವನು ಮೀರಿ ನಡೆಯುವನೋ ಅವನು ಚಂಡಾಲನೂ ಸರ್ವಕರ್ಮ ಬಹಿಷ್ಕೃತನೂ ಆಗುವನು; ಎಂದು ಶಿವಾಗಮಗಳು ಸಾರುತ್ತಿರುವುದರಿಂದ ವೀರಶೈವ ಮತೀಯರು ತಮ್ಮ ತಮ್ಮ ಜಾತಿ ಧರ್ಮದಂತೆ ವರ್ತಿಸಬೇಕಲ್ಲದೆ ಅದಕ್ಕೆ ವಿರುದ್ಧವಾಗಿ ವರ್ತಿಸಿ ನರಕಭಾಗಿಗಳಾಗ ಬಾರದು ॥29 ॥ ವೀರಶೈವಾಚಾರ ವಿಮುಖರಾದ ಪ್ರಾಕೃತಭವಿಗಳು ಕಳುಹಿಸಿದ ಸಕಲ ಪದಾರ್ಥಗಳು ತನ್ನ ಸ್ವಾಧೀನದಲ್ಲಿದ್ದರೂ ಅವುಗಳನ್ನು ಮುಟ್ಟಬಾರದು. ॥ 30॥

ಜನಗಣತಿಯ ವಿವರಗಳು

1901 ರ ಜನಗಣತಿ Census of India, Vol.IX-B Bombay Part III ಇದರಲ್ಲಿ ಪ್ರಾದೇಶಿಕ ವರ್ಗೀಕರಣ ಮಾಹಿತಿ ಇದೆ. R. E. Enthoven ಇದರ ಸಂಪಾದಕರು. ಮುಂಬೈ ಪ್ರಾಂತ್ಯದಲ್ಲಿ ಲಿಂಗಾಯತ ಎನ್ನುವುದರ ಅಡಿಯಲ್ಲಿ ಬರುವ ಉಪಜಾತಿಗಳು ಪುಟ 222

1.	ಆಗಸರ	2.	ಅಯ್ಯ(ಜಂಗಮ)
3.	ಬಡಿಗರು	4.	ಬಣಗಾರ ಅಥವಾ ನಾಗಲಿಕ
5.	ಬಣಜಿಗ	6.	ದೇವಾಂಗ
7.	ಗಾಣಿಗರು	8.	ಹೂಗಾರ ಅಥವಾ ಮಾಲೆಗಾರ

9.	ಕಮ್ಮಾರ	10.	ಕುಡು ಒಕ್ಕಲಿಗ	
11.	ಕುಂಬಾರ	12.	ಕುರುಹಿನ ಶೆಟ್ಟಿ	
13.	ನಾಡಿಗ ಅಥವಾ ನಾವಿ	14.	ಪಂಚಮಸಾಲಿ	
15.	ರೆಡ್ಡಿ	16.	ತಿರಾಲಿ	
17.	ತುರುಕಾರ	18.	ಚಲ್ಲರ	
19.	ಗವಳಿ	20.	ಗವುಂಡಿ(ಉಪ್ಪಾರ)	
21.	ಹಂಡೆಯವರು	22.	ಹಂಡೇರಜೇರ	
23.	ಜೇರ	24.	ಕುರುಬ	
25.	ಕುರುಸಾಲಿ	26.	ಪಟ್ಟಸಾಲಿ	
27.	ಶಿವ ಸಿಂಪಿಗೇರ	28.	ಬಳಿಗಾರ	
29.	ಹಡಪದ	30.	ನೊಳಂಬ	
31.	ಈಳಿಗೇರ ಅಥವಾ ಕಲಾಲ	32.	ಲಾಲಗೊಂಡ	
33.	ಪಂಚಾಚಾರದವರು	34.	ಪದ್ಮ ಸಾಲಿ	
35.	ಪಡಸಾಲಿ	36.	ಸಾದರು	
37.	ಪತ್ತಾರ	38.	ಮಾಳವಾರು	
39.	ಮುಸುಕಿನ ಮಲ್ಲವ	40.	ವಾಣಿ	
41.	ಮಾಳಿ	42.	ತೇಲಿ	43. ಗುರವ

ಇವೆಲ್ಲವೂ ಮುಂಬೈ ಪ್ರಾಂತ್ಯದಲ್ಲಿ 1901 ರಲ್ಲಿ ದಾಖಲಾದ ಲಿಂಗಾಯತರೊಳಗಿನ ಜಾತಿಗಳು. ಸೇರ್ಪಡೆಯಾದ ಜಿಲ್ಲೆಗಳು-ಬೆಳಗಾಂ, ಬಿಜಾಪುರ, ಧಾರವಾಡ, ಕೆನರಾ(ಕರಾವಳಿ), ಕೊಲಾವಾ, ರತ್ನಗಿರಿ. ಗಮನಿಸತಕ್ಕ ಅಂಶವೆಂದರೆ ಇಡೀ ಚಾರ್ಟನಲ್ಲಿ ವೀರಶೈವ ಎಂಬುದು ಲಿಂಗಾಯತದ ಸಮಾನಾರ್ಥದಲ್ಲಿ ಅಲ್ಲ, ಒಂದು ಉಪ ಪಂಗಡವಾಗಿ ಸಹ ಎಲ್ಲೆಲ್ಲೂ ದಾಖಲಾಗಿಲ್ಲ. ಇದರರ್ಥ ಈ ಪದ ಮುಂಬೈ ಪ್ರಾಂತ್ಯಕ್ಕೆ ಪ್ರವೇಶ ಸಹ ಮಾಡಿರಲಿಲ್ಲ ಎಂಬುದು.

Extract of Census of India -1891
Volume xxv - Mysore

Part II Imperial Census India___ index of castes. V.N. Narasiman Iyengar Provincial Superintendent of Census operation in Mysore.

Printed at the Government Central printing press - 1893, Book No: 315 - 487 - IN D 1891 Vol. 2 Caste No 56 page No 309

ಮೈಸೂರು ಪ್ರಾಂತ್ಯದಲ್ಲಿ ಲಿಂಗಾಯತ ಸಮಾಜದಲ್ಲಿ ಪ್ರಚಲಿತವಿದ್ದ ಒಳ ಜಾತಿಗಳು.

1.	ಲಿಂಗಾಯತ - ಆರಾಧ್ಯ	2.	,,	- ಅಯ್ಯ
3.	,, - ಬಡಗಲವ	4.	,,	- ಬಣಜಿಗ
5.	,, - ಬಣ್ಣದವ	6.	,,	- ಬಸಳೆ
7.	,, - ಬಣವೆ	8.	,,	- ಗದ್ದಿಗೆಯವ
9.	,, - ಗೌಡ ಲಿಂಗಾಯತ	10.	,,	- ಗಣಾಧೀಶ್ವರ
11.	,, - ಗೌಡಮನೆ	12.	,,	- ಗೌಳಿಗ
13.	,, - ಗುರುಶೀಲ	14.	,,	- ಹಿರಿಶುಭೆ
15.	,, - ಜಂಗಮ	16.	,,	- ಜ್ಯೋತಿ ಬಣಜಿಗ
17.	,, - ಕಮಾಡಿ ಗೌಡ	18.	,,	- ಕಾಂತಪಾವಡಿ
19.	,, - ಕಾಯ ಕೋಳ	20.	,,	- ಕೋರಿ ಶೆಟ್ಟಿ

21.	,, - ಲಿಂಗಾಯತ	22.	,,	- ಮಾಳವ
23.	,, - ಮೇಲಪಾವಡಿ	24.	,,	- ನೊಣಬ
25.	,, - ನೀರ ಮೇಲಿನವ	26.	,,	- ಪೇಟೆಮನೆ
27.	,, - ಪಂಚಾಚಾರ ಗೌಡ	28.	,,	- ಸಾದರು
29.	,, - ಸಜ್ಜನರು	30.	,,	- ಷಟ್‌ಸ್ಥಲ
31.	,, - ಶೀಲವಂತ	32.	,,	- ಶೈಲದವ
33.	,, - ತಮಿಳು ಜಂಗಮ	34.	,,	- ತಮ್ಮಡಿ
35.	,, - ತೊಗಶೆಟ್ಟಿ	36.	,,	- ಒಡೇರು
37.	,, - ತುರುಕಾನೆ ಬಣಜಿಗ	38.	,,	- ವೀರಶೈವ

1891 ರಲ್ಲಿ ದಾಖಲೆಯಾಗಿರುವ ಪಟ್ಟಿ ನೋಡಿರಿ. ಲಿಂಗಾಯತ ಸಮಾಜದೊಳಗೆ 38 ಒಳಜಾತಿಗಳನ್ನು ಗುರುತಿಸಲಾಗಿದ್ದು ಇದರಲ್ಲಿ ವೀರಶೈವ ಒಂದು ಉಪ ಪಂಗಡ ಮಾತ್ರ; ಕೇರಳದ 1881 ರ ಜನಗಣತಿಯಲ್ಲಿ ಎಸ್.ನಂ. 445 ರಿಂದ 449 ರವರೆಗೆ ಪುಟ 347 ರಲ್ಲಿ ಕೇವಲ ಲಿಂಗಾಯತ ಎಂಬ ಹೆಸರು ಮಾತ್ರ ದಾಖಲಾಗಿದೆ. Imperial Census of India 1881 - Operation and results in thepresidency of Madras (Book No. 315 - 482 IND 1881, Volume - 4)

ಆಂಧ್ರ ಮತ್ತು ತಮಿಳು ನಾಡಿನ ಒಂದು ಮೂಲೆಯಲ್ಲಿ ನಗಣ್ಯವಾಗಿ ಅಸ್ತಿತ್ವದಲ್ಲಿದ್ದ ವೀರಶೈವ ಎಂಬ ಸಣ್ಣ ಒಂದು ಪಂಥವು ವರ್ಣಾಶ್ರಮ ಆಧಾರಿತವಾಗಿ ಇದ್ದುದನ್ನು ಗಮನಿಸಿ ಹಾನುಗಲ್ ಕುಮಾರ ಸ್ವಾಮಿಗಳು ಮತ್ತು ಕಾಶೀನಾಥ ಶಾಸ್ತ್ರಿಯವರ ನೇತೃತ್ವದಲ್ಲಿ ರಂಭಾಪುರಿ ಮಠದವರು ಸಂಚು ಮಾಡಿ ತಂದು ನಂತರದ ದಿನಗಳಲ್ಲಿ ಲಿಂಗಾಯತ ಧರ್ಮದ ಮೇಲೆ ಹೇರಿ ಅದು ಬಳಲುವಂತೆ ಮಾಡಿರುವುದನ್ನು ಐತಿಹಾಸಿಕವಾಗಿ ಗಮನಿಸಬಹುದು. ಇಡೀ ಭಾರತದ ಜನಗಣತಿಯಲ್ಲಿ 1901 ರಲ್ಲಿ ಬಂದ ಲಿಂಗಾಯತರ ಜನಸಂಖ್ಯೆ 25,37,745(ಇಪ್ಪತ್ತೈದು ಲಕ್ಷದ ಮೂವತ್ತೇಳು ಸಾವಿರದ ಏಳು ನೂರಾ ನಲವತ್ತೈದು) ಪುಟ 570. ಇವರಿರುವ ಪ್ರಾಂತ್ಯಗಳೆಂದರೆ ಅಂಡಮಾನ್, ಬಾಂಬೆ, ಕೊಡಗು, ಮದ್ರಾಸ್, ಹೈದ್ರಾಬಾದ್, ಮೈಸೂರು ಮತ್ತು ಟ್ರಾವಂಕೂರು ಪ್ರಾಂತ್ಯಗಳು. ಕಾಣಿಸಿರುವ ಒಳಜಾತಿಗಳು ಲಿಂಗಾಯತ ಬನಿಯ, ದೋಭಿ, ಗವಳಿ, ನಾಯಿಡು, ಶೀಲವಂತ, ಸೋನಾರ್, ಸುತಾರ್, ತೇಲಿ, ಒಕ್ಕಲಿಗರು, ಮಾಳಿ, ವಾಣಿ. ತೆಲುಗು ಪ್ರಾಂತ್ಯದಲ್ಲಿ ವೀರಶೈವರು 4371 ಜನರಿದ್ದಾರೆಂದು, ವೀರಶೈವ ಲಿಂಗಾಯತರು 1553 ಜನರಿದ್ದಾರೆಂದು ದಾಖಲಾಗಿದೆ.

ಇದು ಅತಿ ಮಹತ್ವದ ಮಾಹಿತಿ. ಇದರ ಪ್ರಕಾರ ಲಿಂಗಾಯತರಲ್ಲದ ವೀರಶೈವರು ಆಂಧ್ರದಲ್ಲಿ 1901 ರಲ್ಲಿ 4371 ಜನ ಇದ್ದರೆ, ಲಿಂಗಾಯತ ಧರ್ಮ ಸ್ವೀಕರಿಸಿದ ವೀರಶೈವರು 1553 ಜನ ಇದ್ದರು. ಇದರಿಂದ ತಿಳಿಯುವುದೇನೆಂದರೆ ಲಿಂಗಾಯತ ಧರ್ಮವನ್ನು ಸ್ವೀಕರಿಸಿದ 40-50 ಜಾತಿಗಳವರಲ್ಲಿ ವೀರಶೈವದಿಂದ ಬಂದವರು ಅಂಥದೊಂದು ಪಂಗಡ. ''ಲಿಂಗಾಯತ'' ಎಂಬ ಶೀರ್ಷಿಕೆಯಡಿಯಲ್ಲಿ ಉಳಿದ ಜಾತಿಗಳು ಪಟ್ಟಿ ಮಾಡಲ್ಪಟ್ಟಿವೆ.

1911 ನೆಯ ಜನಗಣತಿಯಲ್ಲಿ ಲಿಂಗಾಯತರ ಜನಸಂಖ್ಯೆ 29,76,293(ಇಪ್ಪತ್ತೊಂಬತ್ತು ಲಕ್ಷದ ಎಪ್ಪತ್ತಾರು ಸಾವಿರದ ಎರಡು ನೂರಾ ತೊಂಬತ್ತ ಮೂರು) 10 ವರ್ಷಗಳ ಅವಧಿಯಲಿ ವೃದ್ಧಿಯಾದ ಸಂಖ್ಯೆ4,38,548(ನಾಲ್ಕು ಲಕ್ಷದ ಮೂವತ್ತೆಂಟು ಸಾವಿರದ ಐದು ನೂರಾ ನಲವತ್ತೆಂಟು). 1901 ಮತ್ತು 1911ರ ಜನಗಣತಿಯಲ್ಲಿ ಲಿಂಗಾಯತ ಜನಸಂಖ್ಯೆ ನಿಖರವಾಗಿ ಸಿಗುತ್ತದೆ. ಪ್ರಾಂತ್ಯವಾರು ಜನಗಣತಿಯಲ್ಲಿ ಸಹ ಲಿಂಗಾಯತರ ಜನಸಂಖ್ಯೆ ನಿಖರವಾಗಿ ಸಿಗುತ್ತದೆ. ಪ್ರಾಂತ್ಯವಾರು ಸಹ ಕೊಡಲಾಗಿದೆ.

ಪ್ರಾಂತ್ಯ		ಒಟ್ಟು	ಪುರುಷ	ಸ್ತ್ರೀ
ಮುಂಬಯಿ	ಲಿಂಗಾಯತ	13,49,248	6,83,472	6,65,776
ಕೇಂದ್ರಾಡಳಿತ	"			
ಬಿಹಾರ	"	7793	4204	3589
ಕೊಡಗು	"	7558	3697	3861

ಮದ್ರಾಸ್	"	1,34,592	66376	68,217
ಜಂಗಮರು	"	1,10,091	54,059	56032
ಹೈದರಾಬಾದ್	"	7,57,611	3,81,201	3,64,340
ಮೈಸೂರು	"	7,29,431	3,65,091	3,64,340

ಈ ಎಲ್ಲ ವೈಜ್ಞಾನಿಕ ಅಧ್ಯಯನದಲ್ಲಿ ತಿಳಿದು ಬರುವುದೇನೆಂದರೆ ಎಲ್ಲೆಡೆಯಲ್ಲಿ ಲಿಂಗಾಯತ ಎಂಬ ಪದವೇ ಪ್ರಧಾನವಾಗಿದೆ. ಜೊತೆಗೆ ಒಳಗಿನ ಜಾತಿಗಳನ್ನು ಕೊಡಲಾಗಿದೆ. ಹೈದರಾಬಾದ್ ಪ್ರಾಂತ್ಯ ಬಿಟ್ಟರೆ ವೀರಶೈವದ ಉಲ್ಲೇಖ ಬೇರೆ ರಾಜ್ಯಗಳಲ್ಲಿ ಇಲ್ಲ. ತಮಿಳುನಾಡು (ಮದ್ರಾಸ್ ಪ್ರಾಂತ್ಯ) ಮತ್ತು ಕೇರಳ (ಕೊಚ್ಚಿನ್ ಮತ್ತು ಟ್ರಾವಂಕೂರ್) ಗಳಲ್ಲಿ ಸಹ ವೀರಶೈವದ ಪ್ರಸ್ತಾಪವಿಲ್ಲ. ತಮಿಳು ನಾಡಿನಲ್ಲಿ ಲಿಂಗಧಾರಿ ಲಿಂಗಾಯತರನ್ನು ಜಂಗಮರೆಂದು ಕರೆಯಲಾಗುತ್ತದೆ. ಅವರ ಸಂಖ್ಯೆಯನ್ನು ಜಂಗಮ ಶೀರ್ಷಿಕೆಯ ಅಡಿಯಲ್ಲಿ ಕೊಡಲಾಗಿದೆ.

ಈ ಬಗ್ಗೆ ಇನ್ನೂ ಅಷ್ಟು ವಿವರಗಳನ್ನು ಕೊಡಬಹುದು. 1881 ರಿಂದ 1901ರ ವರೆಗೆ ನಡೆದ ಇಂಪೀರಿಯಲ್ ಸೆನ್ಸಸ್ ಅಡಿಯಲ್ಲಿ ತಮಿಳು ದೇಶದ ಜಾತಿವಾರು ಕ್ರ.ಸಂ. 3029-3096(64 ಜಾತಿಗಲೂ) ಲಿಂಗಾಯತದ ಉಪ ಜಾತಿಗಳು ಎಂದು ಗುರುತಿಸಲ್ಪಟ್ಟು ಕ್ರ.ಸಂ.3073 ಹಾಗೂ 3094ರಲ್ಲಿ ಕೇವಲ ಎರಡು ಜಾತಿಗಳನ್ನು ಲಿಂಗಾಯತ ವೀರಶೈವವೆಂದು ಗುರುತಿಸಿದ್ದಾರೆ. ಅದೇ ರೀತಿ ತೆಲುಗು ದೇಶದ ಜಾತಿಗಳಲ್ಲಿ ಕ್ರ.ಸಂ 4040-4056 ರವರೆಗೆ ಕ್ರ.ಸಂ 4956,4061 ರ ಜಾತಿಗಳನ್ನು ಲಿಂಗಾಯತ-ಜಂಗಮವೆಂದು ಗುರುತಿಸಿದ್ದಾರೆ. ಒಟ್ಟು 27 ತೆಲುಗು ಲಿಂಗಾಯತ ಜಾತಿಗಳಲ್ಲಿ ಕೇವಲ ಎರಡು ಜಾತಿಗಳನ್ನು ಲಿಂಗಾಯತ-ಜಂಗಮವೆಂದು ಗುರುತಿಸಿದ್ದಾರೆ. ಅದೇ ರೀತಿ ಕನ್ನಡ ದೇಶದ ಲಿಂಗಾಯತ ಜಾತಿಗಳಲ್ಲಿ 38 ಜಾತಿಗಳನ್ನು ಗುರುತಿಸಿ ಅದರಲ್ಲಿ 38 ನೇ ಜಾತಿಯನ್ನು ವೀರಶೈವ ಎಂದು ಗುರುತಿಸಿದ್ದಾರೆ. ಅಂದರೆ ತಮಿಳು 64 ಜಾತಿಗಳು, ತೆಲುಗು 27 ಜಾತಿಗಳ ಪೈಕಿ ಕೇವಲ ಮೂರು ಜಾತಿಗಳಿಗೆ ಲಿಂಗಾಯತ-ವೀರಶೈವವೆಂದೂ ಎರಡಕ್ಕೆ ಲಿಂಗಾಯತ-ಜಂಗಮವೆಂದು ಗುರುತಿಸಿದ್ದಾರೆ. ಅಂದರೆ 134 ಜಾತಿಗಳಿಗೆ ಲಿಂಗಾಯತದ ಉಪಜಾತಿಗಳೆಂದು ಗುರುತಿಸಿ ಅವುಗಳಲ್ಲಿ ಮೂರು ಜಾತಿಗಳನ್ನು ಮಾತ್ರ ಲಿಂಗಾಯತ-ವೀರಶೈವ ಎಂದು 2ನ್ನು ಲಿಂಗಾಯತ-ಜಂಗಮವೆಂದು ಗುರುತಿಸಿದ್ದಾರೆ. ಅಂದರೆ ಮುಖ್ಯ ಧರ್ಮ ಲಿಂಗಾಯತ ಎಂದು ಕರೆದು ಅದರಲ್ಲಿ ವೀರಶೈವರು ಹಾಗೂ ಜಂಗಮರನ್ನು ಒಂದು ಜಾತಿಯಾಗಿ ಗುರುತಿಸಿದ್ದಾರೆಯೇ ಹೊರತು ವೀರಶೈವರಲ್ಲಿ ಲಿಂಗಾಯತರನ್ನು ಸೇರಿಸಿಲ್ಲ. ಅಂದರೆ ಲಿಂಗಾಯತ ಎನ್ನುವ ಒಂದು ದೊಡ್ಡ ಸರ್ವೆ ನಂಬರ್ ತೆಗೆದುಕೊಂಡರೆ ಅದರಲ್ಲಿ ವೀರಶೈವ, ಜಂಗಮ ಎನ್ನುವ ಎರಡು ಹಿಸ್ಸನಂಬರುಗಳು ಬರುತ್ತವೆ. ಆದರೆ ಬಹಳ ಜನರು ತಪ್ಪಾಗಿ ಭಾವಿಸಿದಂತೆ ವೀರಶೈವ ದಲ್ಲಿ ಲಿಂಗಾಯತ ಇಲ್ಲ! ಲಿಂಗಾಯತ ಎನ್ನುವ(134 ಜಾತಿಗಳು) 134 ಎಕರೆಯ ಹೊಲ ತೆಗೆದು ಕೊಂಡರೆ ವೀರಶೈವವು ಕೇವಲ ಮೂರು ಹಿಸ್ಸಾ ನಂಬರ್‌ಗೆ ಸೀಮಿತವಾಗುತ್ತದೆ, ಜಂಗಮವು ಸಹಾ 2 ಹಿಸ್ಸಾ ನಂಬರ್‌ಗೆ ಸೀಮಿತವಾಗುತ್ತದೆ. ಇನ್ನೂ ಸರಿಯಾಗಿ ಹೇಳಬೇಕೆಂದರೆ ಲಿಂಗಾಯತ ಎನ್ನುವ ತಂದೆಗೆ 134 ಮಕ್ಕಳಿದ್ದು ಅದರಲ್ಲಿ 3 ಜನ ವೀರಶೈವರು 2 ಜನ ಜಂಗಮರು ಇದ್ದಾರೆಂದು ಉಳಿದ 129 ಮಕ್ಕಳೂ ಬೇರೆ-ಬೇರೆ ಇದ್ದಾರೆಂದು ಹೇಳಬಹುದು. ಇದಕ್ಕೆಲ್ಲ ದಾಖಲೆಗಳು ಎಂದರೆ Mythic Societyಯ ಪುಸ್ತಕ ಸಂಖ್ಯೆ 315-487ನ್ನ IND 1891-V2 ಹಾಗೂ p-309,315-487 IND-190/- V2PEA; ಹಾಗೂ 315-482-IND-1881-V4ದಲ್ಲಿ ಇದೆ. ಅದು ಬಿಟ್ಟು ವೀರಶೈವ ಹಾಗೂ ಲಿಂಗಾಯತವು ಸಮವೆಂದು ವಾದಿಸುವವರು ದಯವಿಟ್ಟು ತಿಳಿದುಕೊಳ್ಳಿ ಲಿಂಗಾಯತ ಧರ್ಮದ 134 ಮಕ್ಕಳ ತಂದೆಗೆ ವೀರಶೈವ ಹಾಗೂ ಜಂಗಮವೆಂಬುವವು ಇಬ್ಬರು ಮಕ್ಕಳು ಮಾತ್ರ. ಅಂದರೆ ತಂದೆಯಾದ ಲಿಂಗಾಯತಕ್ಕೆ ಈ ಮಕ್ಕಳು ಇಬ್ಬರು ಮಾತ್ರ. ತಂದೆಗೆ ಮಕ್ಕಳು ಜನಿಸುತ್ತಾರೆಯೇ ಹೊರತು ಮಕ್ಕಳಿಗೆ ತಂದೆ ಜನಿಸುವುದಿಲ್ಲ, ಆದ್ದರಿಂದ ಪ್ರಾಜ್ಞರು ಇದನ್ನು ಅರಿಯುವುದೊಳಿತು. ಒಂದು ಬೃಹತ್ ಸಮಾಜದೊಳಗೆ ಸೇರ್ಪಡೆಯಾದ ಒಂದು ಪಂಗಡದ ಹೆಸರನ್ನು ಇಡೀ ಧರ್ಮಕ್ಕೆ ಅನ್ವಯಿಸುವುದು ಅನ್ಯಾಯ ಮತ್ತು ಅಪಚಾರ.

ಹಿಂದಿನ ವರ್ಷಗಳ ಜನಗಣತಿಯ ವಿವರಗಳನ್ನು ಕೊಟ್ಟವರು ಬಳ್ಳಾರಿಯ ಶರಣ ಎಂ.ಆರ್. ಪಂಪನ ಗೌಡರು ಮತ್ತು ಬೆಂಗಳೂರಿನ ಕೊಡಿಗೇಹಳ್ಳಿಯ ಶರಣ ಚನ್ನಬಸವಯ್ಯನವರು. ಅದಕ್ಕಾಗಿ ಅವರಿಗೆ ಧನ್ಯವಾದಗಳು.

2001ರ ಜನಗಣತಿ

Area Name	Religious Community	Rural/ Urban	Population Total/ persons	Males	Females
1	2		3	4	5
INDIA	Lingayat / / Veer Shiva	Total	55,19622	28,09084	27,10538
PUNJAB	Lingayat / / Veer Shiva	Total	9	6	3
CHANDIGARH	Lingayat / / Veer Shiva	Total	1	0	1
UTTARANCHAL	Lingayat / / Veer Shiva	Total	5	3	2
HARYANA	Lingayat / / Veer Shiva	Total	61	37	24
DELHI	Lingayat / / Veer Shiva	Total	27	15	12
RAJASTAN	Lingayat / / Veer Shiva	Total	30	15	15
UTTAR PRADESH	Lingayat / / Veer Shiva	Total	22	11	11
MANIPUR	Lingayat / / Veer Shiva	Total	20	8	12
MEGHALAYA	Lingayat / / Veer Shiva	Total	1	1	0
ASSAM	Lingayat / / Veer Shiva	Total	5	4	1
WEST BENGAL	Lingayat / / Veer Shiva	Total	5	4	1
JHARKHAND	Lingayat / / Veer Shiva	Total	14	6	8
ORISSA	Lingayat / / Veer Shiva	Total	69	37	32
CHHATTISGARH	Lingayat / / Veer Shiva	Total	13	7	6
MADHYA PRADESH	Lingayat / / Veer Shiva	Total	87	41	46
GUJARAT	Lingayat / / Veer Shiva	Total	25	13	12
MAHARASHTRA	Lingayat / / Veer Shiva	Total	505999	260215	245784
ANDHRA PRADESH	Lingayat / / Veer Shiva	Total	27629	13902	13727
KARNATAKA	Lingayat / / Veer Shiva	Total	4969619	2526731	2442888
GOA	Lingayat / / Veer Shiva	Total	464	245	219
KERALA	Lingayat / / Veer Shiva	Total	507	258	249
TAMIL NADU	Lingayat / / Veer Shiva	Tota.	15010	7526	7484

2001ರ ಜನಗಣತಿ ಅವೈಜ್ಞಾನಿಕ

ಇಡೀ ಭಾರತದಲ್ಲಿ ಲಿಂಗಾಯತರ ಸಂಖ್ಯೆ ಐವತ್ತೈದು ಲಕ್ಷದ ಹತ್ತೊಂಬತ್ತು ಸಾವಿರದ ಆರುನೂರಾ ಇಪ್ಪತ್ತೆರಡು ಎಂಬ ಲೆಕ್ಕವೇ ಜನಗಣತಿಯು ನಿಖರವಾಗಿಲ್ಲ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ. ಕರ್ನಾಟಕದ ಒಂದು ಮೂರಂಶ ಜನಸಂಖ್ಯೆ ಲಿಂಗಾಯತರದು ಎಂದು ಫಜಲ್ ಆಲಿ ಕಮಿಷನ್ ವರದಿ ಹೇಳುತ್ತದೆ. ದೆಹಲಿಯಲ್ಲಿ ಇರುವ ಲಿಂಗಾಯತರು ಕೇವಲ 27 ಎಂಬುದು ಹಾಸ್ಯಾಸ್ಪದ. ಅತ್ಯಂತ ದುಃಖಕರ ಸಂಗತಿ ಎಂದರೆ ಲಿಂಗಾಯತಕ್ಕೆ ಸಮಾನ ಸ್ಥಾನದಲ್ಲಿ ವೀರಶೈವವನ್ನು ಬಳಸಿರುವುದು. ಒಂದು ಜಾತಿವಾದಿ, ವರ್ಣಾಶ್ರಮಾಧಾರಿತ ವೈದಿಕ ಗುಂಪನ್ನು ಸ್ವತಂತ್ರ, ಪರಿಪೂರ್ಣ ಜಾತ್ಯತೀತ ಮತ್ತು ಪ್ರಗತಿಪರ ಧರ್ಮದ ಸಮಾನ ಸ್ಥಾನದಲ್ಲಿ ಪರಿಗಣಿಸಿರುವುದು ವಿಷಾದನೀಯ ವಿಚಾರ. ಈ ಅಪರಾಧಕ್ಕೆ ಹೊಣೆ ಅಖಿಲ ಭಾರತ ವೀರಶೈವ ಮಹಾಸಭೆ.

ಈ ಹಿಂದೆ 1904 ರಲ್ಲಿ ಇದು ಸ್ಥಾಪನೆಯಾದಾಗಿನಿಂದ ಆರಂಭವಾದ ಈ ಧೂರ್ತ ಸಂಚು ನಿರಂತರವಾಗಿ ಮುಂದುವರಿದಿದೆ. ಒಂದು ವೇಳೆ ಆಗಮೋಕ್ತ ವೀರಶೈವಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುವ ಬಯಕೆ ಮಹಾಸಭೆಗೆ ಇದ್ದುದೇ ಆದರೆ ಅದು ಗುರುಬಸವಣ್ಣನವರು ಕೊಟ್ಟ ವಚನೋಕ್ತ ಲಿಂಗಾಯತ ಧರ್ಮದೊಡನೆ ಜೋಡಣೆ ಮಾಡಿಕೊಳ್ಳದೆ ಸ್ವತಂತ್ರವಾಗಿ ಪ್ರಯತ್ನಿಸಲಿ. ಲಿಂಗಾಯತ ಧರ್ಮಕ್ಕೆ ತಳುಕು ಹಾಕಿಕೊಂಡು ಇತಿಹಾಸಕ್ಕೆ ವಂಚನೆ ಮಾಡುವುದು ಬೇಡ.

ಧರ್ಮಬಂಧುಗಳೇ, ಲಿಂಗಾಯತ ಧರ್ಮದ ಮುಖಂಡರು ಕೆಲವರ ಧೂರ್ತ ಸಂಚಿಗೆ ಬಲಿಯಾಗಿ ವೀರಶೈವ ಬ್ರಾಹ್ಮಣರು ಎನ್ನಿಸಿಕೊಳ್ಳಲು ಹೋಗಿ ಮಾಡಿರುವ ಪರಮ ಅನ್ಯಾಯವನ್ನು ಸರಿಪಡಿಸಲೇ ಬೇಕಾದ ಕಾಲ ಬಂದಿದೆ. 1.ಲಿಂಗಾಯತರು ಹಿಂದುಗಳಲ್ಲವಾದ ಕಾರಣ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುವುದು, ಪ್ರತ್ಯೇಕ ಜನಗಣತಿ ಹೊಂದುವುದು. 2. ವೀರಶೈವ ಎಂಬ ಒಂದು ಉಪಪಂಗಡದ ಹೆಸರನ್ನು ಕಳಚಿಕೊಳ್ಳುವುದು ಈಗ ಆಗಲೇ ಬೇಕಾಗಿದೆ.

ಸಮಾರೋಪ ಮತ್ತು ಸಂಕಲ್ಪ

1901 ರವರೆಗೆ ಲಿಂಗಾಯತ ಎಂಬ ಸ್ವತಂತ್ರ ತಲೆಬರಹ ಹೊಂದಿದ್ದ ಈ ಧರ್ಮಕ್ಕೆ ವೀರಶೈವ ಎಂಬ ಒಂದು ಅತ್ಯಂತ ಸಣ್ಣ ಶೈವ ಪಂಥದ ಹೆಸರನ್ನು ತಗುಲಿಸಿ, ಲಿಂಗಾಯತದ ನಿಜ ಸ್ವರೂಪ ಕಳೆದವರು ಈ ಸಮಾಜದೊಳಗಣ ಸಂಪ್ರದಾಯವಾದಿ, ಧೂರ್ತರಾದ ಜಾತಿವಾದಿಗಳು. ಈ ಸಂಚಿಗೆ ಶರಣ ಫ.ಗು. ಹಳಕಟ್ಟಿ ಯಂಥವರೂ ಬಲಿಯಾದರು. ಲಿಂಗಾಯತರಲ್ಲಿಯೂ ಜಾತಿ ವರ್ಗೀಕರಣ ಇಲ್ಲವೆ? ಎಂದು ವರ್ಣ ವ್ಯವಸ್ಥೆಗೆ ಹೋಲಿಸುವವರು ಉಂಟು. ಲಿಂಗಾಯತ ಸಮಾಜದಲ್ಲಿ ಜಾತಿಪದ್ಧತಿ ಆಗಂತುಕವೇ ವಿನಾ ಸ್ವಭಾವ ಜನ್ಯವಲ್ಲ. ಅಬ್ಬೆಡ್ಯುಬಾಯಿಸ್ ಹೇಳುವಂತೆ, ಒಳ ಪಂಗಡಗಳ ಭೇದವಿಲ್ಲ. ಜಾತಿ ಭೇದ ತಮ್ಮ ಧರ್ಮದ ಪ್ರಕಾರ ಮಾಡುವುದು ತಪ್ಪು ಎಂಬ ಅರಿವೂ ಬಹುಪಾಲು ಲಿಂಗಾಯತರಿಗಿದೆ.

ಜನಗಣತಿಯಲ್ಲಿ 55,19,622 ಮಾತ್ರ ಲಭ್ಯವಾಗಲು ಕಾರಣವೆಂದರೆ, ಅನೇಕರಿಗೆ And others(ಮತ್ತು ಇತರರು) ಎಂಬ ಅಂಕಣದಲ್ಲಿ ಲಿಂಗಾಯತ ಎಂಬುದನ್ನು ಬರೆಸಲು ಗೊತ್ತಿಲ್ಲದಿರುವುದು. ಗಣತಿದಾರರು ಮೇಲಿನವರ ಆದೇಶವಿಲ್ಲದ ಕಾರಣ ಕೇವಲ ಹಿಂದು ಅಂಕಣದಲ್ಲಿ ಬರೆದುಕೊಂಡು ಹೋಗುವುದು. ಇನ್ನೂ ಕೆಲವು ಗಣತಿದಾರರು ಜನರು ಸರಿಯಾಗಿ ಹೇಳಿದರೂ ಬೇಕಂತಲೇ ಹಿಂದು ಅಂಕಣದಲ್ಲಿ ಬರೆದು ಕೊಂಡಾಗ ಅದನ್ನು ಪರೀಕ್ಷಿಸಬೇಕೆಂಬ ತಿಳುವಳಿಕೆ ಬಹಳ ಜನರಿಗೆ ಇಲ್ಲದಿರುವುದು.

ಈ ಸಮಸ್ಯೆಗೆ ಪರಿಹಾರವೆಂದರೆ ಕೇಂದ್ರ ಸರ್ಕಾರವು ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮನ್ನಣೆ ನೀಡಿ, ಜನಗಣತಿ ಇಲಾಖೆಗೆ ಹಿಂದು, ಬೌದ್ಧ, ಜೈನ, ಸಿಖ್, ಮುಸ್ಲಿಂ, ಕ್ರೈಸ್ತರಿಗೆ ಕ್ರಮವಾಗಿ H.B.J.S.M.C ಎಂಬ ಸಂಕೇತಾಕ್ಷರ ಅಥವಾ ಕ್ರಮ ಸಂಖ್ಯೆ ಜನಗಣತಿ ಪರಿಪತ್ರದಲ್ಲಿ ಕೊಡುವಂತೆ ಲಿಂಗಾಯತಕ್ಕೂ L ಎಂಬ ಸಂಕೇತಾಕ್ಷರವನ್ನು ಅಥವಾ ಕ್ರಮಸಂಖ್ಯೆ 7ನ್ನು ಕೊಟ್ಟು ಗಣತಿದಾರರಿಗೆ ಅಧಿಕೃತವಾಗಿ, ಸ್ಪಷ್ಟವಾಗಿ ತರಬೇತಿಯಲ್ಲಿ ತಿಳಿಸಬೇಕು. 2011ರ ಜನಗಣತಿಯ ಹೊತ್ತಿಗಾದರೂ ಇದನ್ನು ಪಡೆದು ಕೊಳ್ಳಬೇಕು. ಕೇಂದ್ರ ಸರ್ಕಾರದ ಗಮನ ಸೆಳೆಯುವಷ್ಟು ಪ್ರಬಲವಾದ ಮತ್ತು ಸಂಘಟಿತವಾದ ಹೋರಾಟ ಸಾಗಬೇಕು. ಎಲ್ಲ ಸಂಘ - ಸಂಸ್ಥೆ, ಸಂಘಟನೆಗಳು ತಮ್ಮ ತಮ್ಮ ಭಿನ್ನಾಭಿಪ್ರಾಯ ಮರೆತು ಒಟ್ಟಾಗಿ ಚಳುವಳಿ ಮಾಡಬೇಕು. ಈ ದಿಶೆಯಲ್ಲಿ ಎಲ್ಲರೂ ಚಿಂತನೆ ಮಾಡಬೇಕೆಂದು ನಮ್ಮ ಆಶಯ.

ಆಕರ ಗ್ರಂಥಗಳು : ಜನಗಣತಿಯ ಪ್ರಕಟಣೆಗಳು, ಲಿಂಗಾಯತರು ಹಿಂದುಗಳಲ್ಲ : ಡಾ॥ ಎನ್.ಜಿ.ಮಹಾದೇವಪ್ಪ, ಪ್ರ: ಲಿಂಗಾಯತ ಅಕಾಡೆಮಿ, ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ.

ವಚನ ದುಂದುಭಿ -11

- ಶರಣ ಸಚ್ಚಿದಾನಂದ

1. ಲಿಂಗಾಯತ ಧರ್ಮೀಯರ ಷಟ್‌ಕ್ರಿಯೆಗಳು ಯಾವುವು?
2. ಲಿಂಗಾಯತ ಧರ್ಮದ ದರ್ಶನ ಶಾಸ್ತ್ರ ಯಾವುದು? 4. ಪಂಚ ಮಹಾ ಪಾತಕಗಳು ಯಾವುವು?
3. ಅಂತರಂಗದ ಅಷ್ಟಾವರಣಗಳಿಗಿರುವ ಇನ್ನೊಂದು ಹೆಸರೇನು?
5. ರುದ್ರಾಕ್ಷಿ ಧರಿಸುವುದರ ಮೂಲಕ ನಾವು ಯಾವ ಗುಣವನ್ನು ಅಳವಡಿಸಿಕೊಳ್ಳಬೇಕು?
6. ಏನು ಮಾಡಿದರೆ ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸಿಕೊಂಡಂತೆ, ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸಿಕೊಂಡಂತಾಗುತ್ತದೆ?
7. "ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ ಇದ್ದರೇನೊ ಶಿವ ಶಿವ ಹೋದರೇನೋ ಶಿವ ಶಿವ..." ಇದು ಯಾರ ವಚನ?
8. ಸುಂಕದ ಬಂಕಣ್ಣನವರ ವಚನಾಂಕಿತವೇನು?
9. ಶಿವನಾಗಮಯ್ಯನ ವಚನಾಂಕಿತವೇನು? 10. ಗುಡ್ಡವ್ವೆಯವರ ವಚನಾಂಕಿತವೇನು?
11. "ಬಸವಣ್ಣ ಮೆಚ್ಚುವಂತೆ ಒಗೆತನವ ಮಾಡುವೆ" ಇಲ್ಲಿ ಒಗೆತನವೆಂದರೇನು?
12. ವೀರನಾದರೆ ವೈರಿಗಳು ಮೆಚ್ಚಬೇಕು, ಭಕ್ತನಾದರೆ ಯಾರು ಮೆಚ್ಚಬೇಕು?
13. ಹುಟ್ಟಿದ ಮಕ್ಕಳಿಗೆ ಮಾಡಿಸುವ ಮೊದಲ ಸಂಸ್ಕಾರ ಯಾವುದು??
14. ಗುರುಬಸವಣ್ಣನವರ ಪ್ರಾಣ ಎಲ್ಲಿದೆ?
15. "ಜ್ಯೋತಿಯಿದ್ದ ಮನೆಯಲ್ಲಿ ಕತ್ತಲೆಯುಂಟೆ? ಲಿಂಗವಿದ್ದಲ್ಲಿ ಅಜ್ಞಾನವುಂಟೆ?
ಅಜ್ಞಾನವಿಲ್ಲವಾಗಿ ಹೆಂಗಳಿಗೆ ಸೋಲರು, ಹೊಂಗಳಿಗೆಳಸರು
ಮಹಾಲಿಂಗೈಕ್ಯರಯ್ಯಾ ನಿಮ್ಮ ಪ್ರಮಥರು, ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೆ."
ಇದು ಯಾರ ವಚನ?

ವಚನ ದುಂದುಭಿ -10ರ ಸರಿ ಉತ್ತರಗಳು

1. ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರದು.
2. ಕ್ರಿಯಾ ದೀಕ್ಷೆ, ವೇಧಾ ದೀಕ್ಷೆ, ಮಂತ್ರ ದೀಕ್ಷೆ,
3. ಭೇರಿ, ದುಂದುಭಿ, ಕಹಳೆ, ಶಂಖ, ತೂರ್ಯ.
4. ಗುರು ದ್ರೋಹ, ಲಿಂಗದ್ರೋಹ, ಜಂಗಮ ದ್ರೋಹ, ಆಚಾರ ದ್ರೋಹ, ಪ್ರಸಾದ ದ್ರೋಹ
5. ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಮ್. 6. ವೀರಮಾತೆ ಅಕ್ಕನಾಗಲಾಂಬಿಕಾ ತಾಯಿ
7. ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರ ಬಗ್ಗೆ 8. ಶಾಂತ ಕೂಡಲ ಚೆನ್ನ ಸಂಗಮದೇವಾ
9. ನಿಜಲಿಂಗ ಪ್ರಭುವೆ
10. ಅಮುಗೇಶ್ವರ ಲಿಂಗ
11. ಅಲ್ಲಮ ಪ್ರಭುದೇವರು ಸಿದ್ದರಾಮೇಶ್ವರರಿಗೆ
12. ಮಾತಾಜಿಯವರ ನುಡಿಗಳು
13. ಅಲ್ಲಮ ಪ್ರಭುದೇವರು
14. ಲಾವಣ್ಯ ಮತ್ತು ಶೀಲವಂತರ ವಿವಾಹ ಮಾಡಿಸಿರುವುದು
15. 17ನೇ ಪೀಠಾರೋಹಣ

ವಚನ ದುಂದುಭಿ -9ರ ಸರಿ ಉತ್ತರ ಕೊಟ್ಟವರು

1. ನಿರ್ಮಲಾ ಜಯದೇವ, ಬೆಂಗಳೂರು 2. ಸುನೀತಾ ಜೋಡಳ್ಳಿ,ಹುಬ್ಬಳ್ಳಿ
3. ಸುವರ್ಣಮ್ಮ ಪಂಚಾಕ್ಷರಪ್ಪ ಭದ್ರಾವತಿ 4. ಮಮತಾ ಪ್ರವೀಣ,ಭದ್ರಾವತಿ
5. ಸರ್ವಮಂಗಳಾ ಗಂಗಾಧರ, ಬೆಂಗಳೂರು 6. ಎಚ್.ಚಂದ್ರಿಕಾ,ಭದ್ರಾವತಿ
7. ಶೀಲ ಆನಂದ ಗುಡಸ್, ಬೆಳಗಾವಿ 8. ಬಸವ ಚಂದ್ರಿಕೆ, ಬೆಂಗಳೂರು
9. ಮಲ್ಲನಗೌಡ ಪೋ.ಪಾಟೀಲ,ರಾಯಚೂರು 10.ಪ್ರತಿಭಾ ಸಂತೋಷ್ ಗುಡಸ್
11.ಪ್ರಿಯಾಂಕ, ಹುಬ್ಬಳ್ಳಿ 12. ಸವಿತ ಹುಬ್ಬಳ್ಳಿ

☹ ಸಮಸ್ಯೆ ? - ಸಮಾಧಾನ ! ☺

ವೀರಭದ್ರಪ್ಪ ಪಾರಶೆಟ್ಟಿ, ನಿ.ಪಿ.ಎಸ್.ಐ. ಕಲುಬುರ್ಗಿ

? ಆಂಧ್ರ ಪ್ರದೇಶದ ಕೋಡಂಗಲ್ ಎಂಬಲ್ಲಿರುವ ಸಂಗವ್ವ ಗುರುಲಿಂಗಪ್ಪ ಎನ್ನುವವರು ಹೀಗೊಂದು ವಿಚಾರ ಹೇಳಿದರು. ಗುರು ಬಸವಣ್ಣನವರು ಹಡಪದ ಅಪ್ಪಣ್ಣ ಶರಣರು ಕೂಡಲ ಸಂಗಮಕ್ಕೆ ಹೋದರು. ನೀಲಾಂಬಿಕಾ ತಾಯಿಯವರು ಕಲ್ಯಾಣದಲ್ಲಿ ಉಳಿದರು. ಅಗ್ಘವಣಿ ಹಂಪಯ್ಯನು ನಿತ್ಯವೂ ಅವರಿಗೆ ಅಗ್ಘವಣಿ, ಪತ್ರೆ-ಪುಷ್ಪ ತಂದು ಕೊಡುತ್ತಿದ್ದ. ನಂತರ ಅಪ್ಪಣ್ಣನವರು ಕರೆಯಲು ಬಂದರು. ಹೋದಾಗ ನದಿಯು ತುಂಬಿ ಹರಿಯುತ್ತಿತ್ತು. ತಮಗೆ ಮುತ್ತೈದೆ ಸಾವು ಬೇಕು ಎಂದು ಬಸವಣ್ಣನವರಿಗೂ ಪೂರ್ವದಲ್ಲೇ ನೀಲಾಂಬಿಕಾ ತಾಯಿಯವರು ಲಿಂಗೈಕ್ಯರಾಗುತ್ತಾರೆ.

★ ಸಂಗವ್ವನವರು ಹೇಳಿದ ಪೂರ್ವಾರ್ಧದ ಕಥೆ ಸರಿ ಇದೆ. ನೀಲಾಂಬಿಕಾ ತಾಯಿಯವರು ಕಲ್ಯಾಣದಲ್ಲಿಯೇ ಉಳಿದರು. ಆದರೆ ಕಲ್ಯಾಣವು ಕಟುಕರ ಕೇರಿಯಂತೆ ಆದಾಗ ನಿಸ್ಸಹಾಯಕರಾದ ಶರಣರನ್ನು ಕರೆದುಕೊಂಡು ಇಂದಿನ ಖಟಕ ಚಿಂಚೋಳಿ ಎಂಬ ಊರಿನ ಹೊರಗಿನ ಗವಿಯಲ್ಲಿ ಉಳಿದರು. ಸುಮಾರು 3-4 ತಿಂಗಳು ಕಾಲ ಇದ್ದು ನಂತರ ಅಪ್ಪಣ್ಣನವರು ಕರೆಯಲು ಬಂದಾಗ ಸಂಗಮ ದತ್ತ ನಡೆದರು. ನದಿ ತುಂಬಿ ಪ್ರವಾಹ ಇದ್ದುದರಿಂದ ದಾಟಲಾಗದೆ ತಂಗಡಗಿಯಲ್ಲಿ ಬೀಡಾರ ಹೂಡಿ, ಕಾಯುತ್ತಿದ್ದರು.

ಗುರು ಬಸವಣ್ಣನವರು ಶ್ರಾವಣ ಪಂಚಮಿ ದಿನ ಲಿಂಗೈಕ್ಯರಾದರು. ಅವರ ಸಮಾಧಿಯ ಮೇಲೆ ಹಚ್ಚಿಟ್ಟ ದೀಪದ ದರ್ಶನವನ್ನು ತಾಯಿಯವರು ಪಡೆದರು. ಮುತ್ತೈದೆ ಸಾವು, ಮುಂಡೆಯ ಸಾವು - ಈ ಪದಗಳು ಶರಣ ಸಂಸ್ಕೃತಿಯವು ಅಲ್ಲ. ಎಲ್ಲರ ಪತಿ ಪರಮಾತ್ಮ. ಮರುದಿನ ಇಚ್ಛಾಮರಣಿಯಾಗಿ ನೀಲಮ್ಮನವರು ಲಿಂಗೈಕ್ಯರಾದರು. ಇದಕ್ಕೆ ದಾಖಲೆ ಎಂಬಂತಿದೆ, ನೋಡು ನೋಡು ಲಿಂಗವೆ ಎಂಬ ಗೀತೆ. ಒಡೆಯ ಸಂಗಮನೊಳು ಬೆರೆದರಂತೆ ಎಂದು ನೀಲಾಂಬಿಕಾ ತಾಯಿ ಬಸವಣ್ಣನವರು ಲಿಂಗೈಕ್ಯರಾದುದನ್ನು ಸೂಚಿಸಿದ್ದಾರೆ. ಈ ಬಗ್ಗೆ ಬೇರೆ ಸಾಕಷ್ಟು ವಚನಗಳೂ ಇವೆ.

ಎರಡನೆಯ ದಾಖಲೆ, ನೀಲಾಂಬಿಕಾ ತಾಯಿಯ ಗದ್ದುಗೆಯ ಗೋಡೆಯಲ್ಲಿ ಒಂದು ಚೌಕಾಕಾರದ ಕಿಂಡಿ ಇತ್ತು. ಅದರಲ್ಲಿ ನೋಡಿದಾಗ ಗುರು ಬಸವಣ್ಣನವರ ಸಮಾಧಿ - ಐಕ್ಯಮಂಟಪದಲ್ಲ ಹಚ್ಚಿಟ್ಟ ಜ್ಯೋತಿ ರಾತ್ರಿ ಹೊತ್ತು ಕಾಣುತ್ತಿತ್ತು. ಹೋದವರಿಗೆಲ್ಲ ಇದನ್ನು ಪೂಜಾರಿಗಳು ಹೇಳುತ್ತಿದ್ದರು. ತಾಯಿಯವರು ಅಲ್ಲಿಂದಲೇ ಜ್ಯೋತಿ ದರ್ಶನ ಪಡೆದರು ಎಂದು ಪೂಜಾರಿಗಳು ಹೇಳುತ್ತಿದ್ದರು. ಸಮಾಧಿಯ ಮೇಲೆ ದೀಪ ಹಚ್ಚಿಡುವ ಸಂಪ್ರದಾಯ ಇಂದಿಗೂ ಇದೆ ಎಂಬುದು ಗಮನಾರ್ಹ

ಲೀಲಾವತಿ ಕರಡಿ (ನಾಡಗೌಡರು), ಬೆಂಗಳೂರು

? ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ಯು. ಆರ್. ಅನಂತ ಮೂರ್ತಿಯವರು ಸಾಂಪ್ರದಾಯಿಕ ವೈದಿಕರಿಂದ ತಿರಸ್ಕೃತರಾಗಿರುವ ನೀವು ಬೌದ್ಧ ಧರ್ಮವನ್ನೇಕೆ ಸ್ವೀಕರಿಸಬಾರದು? ಎಂದು ಶ್ರೋತೃಗಳು ಕೇಳಿದಾಗ, "ನನಗೆ ಹೆಚ್ಚು ಉತ್ತಮವಾಗಿ ಕಾಣುವುದು ವೀರಶೈವ ಧರ್ಮ. ಆದರೆ ಅದಿಂದು ಮಠಾಧಿಪತಿಗಳ ಕೈಗೆ ಸಿಕ್ಕಿ ನಲುಗಿ ಹೋಗಿದೆ." ಎಂದಿದ್ದಾರಲ್ಲ, ಇದು ಹೇಗೆ ?

★ ವಿಚಾರ ಶೀಲರಿಗೆ ಮೆಚ್ಚುಗೆಯಾಗುವುದು ವಚನೋಕ್ತ ಲಿಂಗಾಯತ ಧರ್ಮವೇ ವಿನಾ ಆಗಮೋಕ್ತ ವೀರಶೈವವಲ್ಲ. ಧೂರ್ತರಾದ ಪುರೋಹಿತ ಶಾಹಿ, ಪಂಚ ಪೀಠಾಧೀಶರು, ಡಾ|| ಚಿ.ಮೂರಂತಹ ಅಪ್ರಾಮಾಣಿಕ ಲೇಖಕರ ಕುತಂತ್ರವನ್ನರಿಯದೆ ಬಹುಪಾಲು ಲಿಂಗಾಯತರು ತಮ್ಮದು ವೀರಶೈವ ಎಂದು ಕರೆದುಕೊಂಡ ಕಾರಣ, ಲಿಂಗಾಯತೇತರರು ವೈಚಾರಿಕವಾಗಿರುವುದು ವೀರಶೈವ ಎಂದು ತಪ್ಪು ತಿಳಿದಿದ್ದಾರೆ. ವೀರಶೈವವು ವೈದಿಕ ಸಂಪ್ರದಾಯವನ್ನು ಅನುಸರಿಸುವ ಪಂಥ ಎಂದು ಲಿಂಗಾಯತೇತರರು ತಿಳಿದಿಲ್ಲ. ವಚನೋಕ್ತ ಲಿಂಗಾಯತವು ಸಂಪ್ರದಾಯವಾದಿ ಮಠಾಧೀಶರ ಕೈಗೆ ಸಿಕ್ಕು ವಿಕೃತಗೊಂಡಿದೆ ಎಂಬುದನ್ನು ಅನಂತ ಮೂರ್ತಿಯವರು ಹೇಳಿರುವುದು ಸರಿ. ನಾವೂ ಅದನ್ನೇ ಹೇಳುತ್ತೇವಲ್ಲವೆ ?

ಎಂ.ಆರ್. ದುಬಲಗುಂಡಿ, ಚಿಮ್ಮನ ಚೋಡ, ಬೀದರ್ ಜಿಲ್ಲೆ

1.? ಲಿಂಗಾಯತರಲ್ಲಿನ ಪ್ರಬಲ ಜಾತಿಗಳವರು ಕೆಲವೊಂದು ಕಾಯಕ ಜೀವಿ ಜಾತಿಗಳವರನ್ನು ಉದಾ: ಕ್ಷೌರಿಕ ಲಿಂಗಾಯತರನ್ನು ಲಿಂಗಧಾರಿಗಳು ಎಂದು ಕರೆಯುತ್ತಾರೆ. ಅವರೂ ಕೂಡ ಶರಣ. ಹಡಪದ ಅಪ್ಪಣ್ಣನವರ ಮಾರ್ಗವನ್ನು ಹಿಡಿಯದೆ ಇಷ್ಟಲಿಂಗವನ್ನು ಬಿಟ್ಟು, ಪೂರ್ವದ ಜಾತಿಯೊಡನೆ

ಸೇರಲು ಆರಂಭಿಸಿದ್ದಾರೆ. ಅವರನ್ನು ಲಿಂಗಾಯತ ಸಮಾಜದ ಮುಖ್ಯ ವಾಹಿನಿಯಲ್ಲಿ ಸೇರಿಸಲು ನಾವು ಪ್ರಯತ್ನಿಸಿದರೆ ಲಿಂಗಧಾರಿಗಳಲ್ಲದ ಕ್ಷೌರಿಕರು ನಮ್ಮ ಸಮಾಜವನ್ನು ಒಡೆಯಬೇಡಿ ಎಂದು ಆಕ್ಷೇಪಿಸುತ್ತಾರೆ. ಇದು ಸರಿಯೆ ?

★ ಮೇಲ್ಜಾತಿಯ ಲಿಂಗಾಯತರೆಂದು ಬೀಗುವ ಅಯ್ಯನವರು, ಬಣಜಿಗರು, ಪಂಚಮಸಾಲಿಯವರು ಲಿಂಗಾಯತೇತರರನ್ನು ಮಾತ್ರವಲ್ಲದೆ ಉಳಿದ ಲಿಂಗಾಯತರನ್ನು ಸಹ ಭೇದಭಾವದಿಂದ ನೋಡಿದ್ದರಿಂದಲೇ ಲಿಂಗಾಯತರೊಳಗಣ ಒಳಪಂಗಡಗಳವರು ಸಹ ತಮ್ಮ ಉಪಜಾತಿಯ ಸಂಘಟನೆ ಮಾಡಿಕೊಂಡರು. ಅಷ್ಟರಲ್ಲಿ ಹಾವನೂರು ವರದಿ ಬಂದು ಮುಂದುವರಿದವರು, ಹಿಂದುಳಿದವರು ಎಂಬ ವರ್ಗೀಕರಣ ಮಾಡತೊಡಗಿದಾಗ ಲಿಂಗಾಯತೇತರರು ಮಾತ್ರವಲ್ಲ ಕೆಲವು ಲಿಂಗಾಯತ ಒಳಪಂಗಡಗಳವರು ಸಹ ಮುಖ್ಯ ವಾಹಿನಿಯಿಂದ ದೂರ ಸರಿಯ ತೊಡಗಿದರು. ಯಾರಿಗೆ ಧರ್ಮ, ದೇವರು ನಗಣ್ಯವಾಗಿ ಹೊಟ್ಟೆ ಪಾಡು ಮುಖ್ಯವೋ ಅವರು ಲಿಂಗಾಯತದಿಂದ ದೂರ ಸರಿದರು. ಭೌತಿಕವಾಗಿ ಏನೆಲ್ಲ ಗಳಿಸಿದರೇನು, ಧರ್ಮಸಂಸ್ಕಾರವಿಲ್ಲದ ಜೀವನ ಅರ್ಥರಹಿತ ಎಂದು ತಿಳಿಯುವ ಹಡಪದ ಅಪ್ಪಣ್ಣ, ಮಡಿವಾಳ ಮಾಚಿದೇವ, ಮೇದಾರ ಕೇತಯ್ಯ, ಸಮಗಾರ ಹರಳಯ್ಯ, ಡೋಹಾರ ಕಕ್ಕಯ್ಯ, ಜೇಡರ ದಾಸಯ್ಯರಂಥವರನ್ನು ಅನುಸರಿಸುವವರು ಧರ್ಮವನ್ನೇ ಆಶ್ರಯಿಸುವರು ಪೂರ್ವದ ಜಾತಿಯನ್ನಲ್ಲ.

1.? ಈ ಒಡೆಯುವಿಕೆ ಪರಿಹಾರ ಉಂಟೆ ?

★ ಲಿಂಗಾಯತರು ತಮ್ಮ ಧರ್ಮಗುರುವಿನ ಕಳಕಳಿಯನ್ನು ಅರಿತು ಎಲ್ಲರನ್ನು ಆದರಿಸಬೇಕು. ತಮ್ಮ ಧರ್ಮದ ಶ್ರೇಷ್ಠತೆ ಕುರಿತು ಪುನಃ ಪುನಃ ಹೇಳಿದಾಗ ಲಿಂಗಾಯತರು, ಲಿಂಗಾಯತೇತರ ಉಭಯತರೂ ಧರ್ಮವನ್ನು ತೊರೆಯುವುದಿಲ್ಲ. ಒಬ್ಬ ವ್ಯಕ್ತಿ ಯಾವುದೇ ಆದರ್ಶಗಳು ಮೈಗೂಡದಿದ್ದಾಗ ಅವನಿಗೆ ಹೊಟ್ಟೆ-ಬಟ್ಟೆ ಹೊಂದಿ ಬದುಕುವುದೇ ಮುಖ್ಯವಾಗುತ್ತದೆ. ಕೆಲವೊಂದು ಆದರ್ಶಗಳು ಮೈಗೂಡಿದಾಗ ಎದುರಾಗುವ ಕಷ್ಟಗಳಾಗಲಿ, ಹೊಟ್ಟೆ-ಬಟ್ಟೆ ಪ್ರಮುಖವಾಗುವುದಿಲ್ಲ. ಆದ್ದರಿಂದ ಒಂದು, ಅನುಯಾಯಿಗಳಲ್ಲಿ ಆದರ್ಶವನ್ನು ಬೆಳೆಸುವುದು; ಇನ್ನೊಂದು ಹಳಬರು ಅಂದರೆ ಹುಟ್ಟು ಲಿಂಗಾಯತರು ಹೊಸದಾಗಿ ಬಂದವರನ್ನು ಆತ್ಮೀಯವಾಗಿ ಸ್ವಾಗತಿಸಿ, ಆದರದಿಂದ ಇಂಬಿಟ್ಟು ಕೊಳ್ಳಬೇಕು. ಆಗ ಅವರು ಮುಖ್ಯವಾಹಿನಿಗೆ ಸೇರಿಕೊಂಡು ಬಿಡುತ್ತಾರೆ. ಇವರನ್ನು ಸವಲತ್ತುಗಳಿಗಾಗಿ ಧರ್ಮವಿರಹಿತರನ್ನಾಗಿ ಮಾಡಬೇಕು ಎಂಬ ಜಾತಿವಾದಿಗಳ ಸಂಚಿಗೆ ನಿಜ ಭಕ್ತರು ಬಲಿಯಾಗುವುದಿಲ್ಲ.

ರಾಮಲಿಂಗಪ್ಪ ದೇವಣಿ, ಬೀದರ್

1.? ಪಂಚ ಪೀಠಾಧೀಶರು ಬಾಳೆ ತೋಟಕ್ಕೆ ನುಗ್ಗುವ ಆನೆಗಳಂತೆ, ಅಡ್ಡಪಲ್ಲಕ್ಕಿ ಏರಿ, ನುಗ್ಗಿ ಜನಗಳ ಮನಸ್ಸಿನಲ್ಲಿ ಮೂಢ ನಂಬಿಕೆ ತುಂಬಿ ವೈಚಾರಿಕತೆಯನ್ನು ಧ್ವಂಸ ಮಾಡುವರು. ಬಹುದೇವತೋಪಾಸನೆ, ಜಾತೀಯತೆ, ವೀರಶೈವ ಇತ್ಯಾದಿ ಕಸವನ್ನು ತುಂಬುವುದಲ್ಲದೆ ಬಸವಣ್ಣನವರು ವೀರಶೈವವನ್ನು ಉದ್ಧರಿಸಿದರು ಎಂದು ಹೇಳುತ್ತಾರೆ. ಇದರಿಂದ ನೊಂದ ಮತ್ತು ಆಕ್ರೋಶಗೊಂಡ ಬಸವ ತತ್ತ್ವವಾದಿ ಮಠಾಧೀಶರು, ಸಂಘಟನೆಗಳು ಒಕ್ಕೂಟ ರಚಿಸಿಕೊಂಡು ಪ್ರತಿಭಟಿಸಿದೆವು. ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದಂತೆ ಅಡ್ಡಪಲ್ಲಕ್ಕಿಯನ್ನು ಸರ್ಕಾರವು ನಿಷೇಧಿಸಬೇಕೆಂದು ಹೇಳಿಕೆ ನಿಡಿದೆವು. ಈ ಹೋಲಿಕೆ ತಪ್ಪೆಂದು ಹನ್ನೆರಡು ಮಠ ಇವರು ನಮ್ಮನ್ನು ಟೀಕಿಸಿದ್ದಾರೆ. ಮತ್ತು ನಮ್ಮ ಸಂಪ್ರದಾಯವಿದು ಎಂದು ಪಂಚಪೀಠಾಧೀಶರು ಅಡ್ಡ ಪಲ್ಲಕ್ಕಿಯನ್ನು ಸಮರ್ಥಿಸಿಕೊಳ್ಳುತ್ತಾರೆ. ಇದು ಸರಿಯೆ ?

★ ನಿಮ್ಮ ಪ್ರತಿಭಟನೆ ಸರಿ. ಏಕೆಂದರೆ ಪಂಚ ಪೀಠಾಧೀಶರು ಅಡ್ಡಪಲ್ಲಕ್ಕಿಯಲ್ಲಿ ಕುಳಿತು ಹೊರಿಸಿಕೊಂಡು ಮಾನವತೆಗೆ ಅವಮಾನ ಮಾಡುವುದಷ್ಟೇ ಅಲ್ಲ ಲಿಂಗಾಯತ ಧರ್ಮದ ಶುಚಿತ್ವವನ್ನು ಕೆಡಿಸುತ್ತಿದ್ದಾರೆ. ಅವರಿಗೆ ಸಂಬಂಧವಿಲ್ಲದಿದ್ದರೂ ಬಸವಣ್ಣನವರನ್ನು, ಶರಣರ ವಚನಗಳನ್ನು ಬಲವಂತ-ವಾಗಿ ಎಳೆದು ತಂದು ವೀರಶೈವ ಪದವನ್ನು ಕೃತಕವಾಗಿ ಸೇರಿಸಿ ಸಮಾಜಕ್ಕೆ ಬಹಳ ಅನ್ಯಾಯ ಮಾಡುತ್ತಿದ್ದಾರೆ. ದಲಿತರು ಮಲ ಹೊರುವುದಕ್ಕಿಂತಲೂ ಕೀಳಾದುದು ಜೀವಂತವಿರುವಾಗಲೇ ಹೆಗಲೇರಿ ಮೆರೆಯುವುದು. ಆದ್ದರಿಂದ ಅದನ್ನು ನಿಷೇಧಿಸಿದಂತೆ ಅಡ್ಡಪಲ್ಲಕ್ಕಿಯನ್ನು ನಿಷೇಧಿಸಲು ಆಗ್ರಹಿಸಿರುವ ನಿಮ್ಮ ಹೇಳಿಕೆ ಅಭಿನಂದನೀಯ! ಅಮಾನವೀಯ, ಅವೈಜ್ಞಾನಿಕ, ಅತಾರ್ಕಿಕ ಸಂಪ್ರದಾಯಗಳನ್ನು ನಿಷೇಧಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಸತಿ ಸಹಗಮನ ನರ ಬಲಿ, ದೇವರ ಹೆಸರಲ್ಲಿ ಪ್ರಾಣಿವಧೆ ಇವೆಲ್ಲವೂ ಕೆಲವೊಂದು ಪಂಗಡಗಳ ಸಂಪ್ರದಾಯಗಳೇ. ಇವೆಲ್ಲ ಅಮಾನವೀಯ, ಕ್ರೂರ ಎಂದು ಸರ್ಕಾರಗಳು ನಿಷೇಧಿಸಿಲ್ಲವೆ? ಸತ್ ಸಂಪ್ರದಾಯ ಅನುಕರಣಾರ್ಹ, ಸತ್ತ ಸಂಪ್ರದಾಯ ನಿಷೇಧಾರ್ಹ.

ಶರಣ ಮೇಳಕ್ಕೆ ಬನ್ನಿ

ಬನ್ನಿ ಬನ್ನಿ ಶರಣರೆ ಬಸವಣ್ಣನ ಕುಡಿಗಳೆ
ಶರಣ ಮೇಳದಲ್ಲಿ ನಾವು ಕೂಡಿ ಆಡುವ ॥ ಬನ್ನಿ ॥

ಇತಿಹಾಸ ಸಂಪುಟದಲ್ಲಿ ಕಂಗೊಳಿಸುತ್ತಿರುವ
ಧರ್ಮಗುರು ಬಸವಣ್ಣನ ಐಕ್ಯಕ್ಷೇತ್ರ ಸಂಗಮದಲ್ಲಿ
ಜ್ಞಾನಗಂಗೆ ಹರಿಸುತಿರುವ ಮಾತೆಯ ಮಡಿಲಲ್ಲಿ
ಮಿಂದು ಮಡಿಯುಟ್ಟು ಪಾವನರಾಗುವ ॥ ಬನ್ನಿ ॥

ಇಷ್ಟಲಿಂಗ ಜನಕ ಗುರು ಬಸವಣ್ಣನ ಪುಣ್ಯಕ್ಷೇತ್ರದಲ್ಲಿ
ಮಾತೃ ಹೃದಯಿ ಬಸವಣ್ಣನ ತಪೋಭೂಮಿ ಸಂಗಮದಲ್ಲಿ
ಸಾಮೂಹಿಕ ಇಷ್ಟಲಿಂಗಾರ್ಚನೆಯ ಮಾಡುತ
ಲಿಂಗಾಂಗ ಸಮರಸ ಸುಖದಿ ತೇಲಾಡುವ ॥ ಬನ್ನಿ ॥

ಬಸವ ತತ್ವ ಸೌರಭವ ಸೂಸುತಿರುವ ಮಾತೆಯಿಂದ
ಬಸವ ವಾಣಿಯ ಕೇಳಿ ಪುನೀತರಾಗುವ
ಸಮುದಾಯ ಪ್ರಾರ್ಥನೆಯಿಂದ ಅನುಭವ ಮಂಟಪ
ಧರೆಗಿಳಿದ ಕೈಲಾಸದ ದಿವ್ಯಾನುಭವ ಪಡೆಯಲು ॥ ಬನ್ನಿ ॥

ಸ್ತ್ರೀಕುಲದ ಶಿರೋಮಣಿ ಪೂಜ್ಯ ಗುರು ಮಾತೆಯು
ನಡೆಸುತಿರುವ ವೈಭವದ ಶರಣ ಮೇಳ
ಮೈಲಿಗಲ್ಲಾಗುತಿದೆ ಇತಿಹಾಸದ ಪುಟದಲ್ಲಿ
ಪಾಲ್ಗೊಳ್ಳುವ ಭಾಗ್ಯವು ನಮಗಿಂದು ಬಂದಿದೆ ॥ ಬನ್ನಿ ॥

ಬಸವಣ್ಣನ ಮಹಾಮನೆಯ ತವರೆಂದು ನಮ್ಮ ಕರೆದು
ಸುಜ್ಞಾನವೆಂಬ ದಿವ್ಯಾಂಬರವನ್ನು ನಮಗೆಲ್ಲಾ ಉಡಿಸಿ
ದಿವ್ಯಾನುಭೂತಿಯೆಂಬ ಆನಂದದ ಔತಣವನಿತ್ತು
ಬಸವ ತತ್ವ ರತ್ನಗಳ ಉಡಿಯ ತುಂಬಿ ಕಳಸುವರು ॥ ಬನ್ನಿ ॥

ಶರಣ ಮೇಳದಲ್ಲಿ ನಡೆವ ಚಿಂತನಗೋಷ್ಠಿಯಲ್ಲಿ
ಸಮಾಜದ ಆಗು ಹೋಗುಗಳ ಚಿಂತನೆಯ ನಡೆಸಿ
ಧರ್ಮ ಸಮ್ಮತವಾದ ನಿರ್ಣಯವ ಕೈಗೊಂಡು
ಸಂದೇಶವ ಕೊಡುವರು ವರುಷಕೆ ಹೊಸದೊಂದು ॥ ಬನ್ನಿ ॥

ಲಿಂಗಾಯುತ ಧರ್ಮದ ಕಹಳೆಯನ್ನು ಊದುತ
ಸಮಾನತೆಯ ತತ್ವವನ್ನು ಜಗಕ್ಕೆಲ್ಲಾ ಸಾರುತ
ಮೇಲು ಕೀಳು ಎಂಬ ಉಬ್ಬುತಗ್ಗುಗಳ ಸಮ ಮಾಡಿ
ಕಲ್ಯಾಣ ರಾಜ್ಯವ ನಿರ್ಮಾಣ ಮಾಡುವ ॥ ಬನ್ನಿ ॥

ಬಸವಣ್ಣನ ಪ್ರಾಣವು ವಚನ ಸಾಹಿತ್ಯವೆಂದು
ಬಸವ ತತ್ವಕ್ಕೋಸ್ಕರ ಹಗಲಿರುಳು ದುಡಿಯುತಿರುವ
ತ್ಯಾಗಮಯಿ ಮಾತಾಜಿಯ ಕರೆಯಿದು ಕೇಳಿರಿ
ಒಂದಿಷ್ಟು ತನು ಮನ ಧನವ ಸವೆಸುವ ಬನ್ನಿರಿ ॥ ಬನ್ನಿರಿ ॥

ಹಾಡುವ ಪಾಡುವ ನೋಡುವ ನಲಿದಾಡುವ
ತವರ ಸಿರಿ ಬಸವಣ್ಣನ ದಿವ್ಯಕ್ಷೇತ್ರದಲ್ಲಿ
ಸಚ್ಚಿದಾನಂದ ಪ್ರಿಯೆ ಮಾತಾಜಿಯ ಕರುಣೆಯಿಂದ
ನಮಗಿಂತಹ ಭಾಗ್ಯವು ದೊರೆತಿದೆ ಇಂದು

- ಶಾರದಾ ಬಸವರಾಜ್


CPMG/KA/BGW-50/2006-2008 WPP(W) 17R.No.19980/70